ರಾಜ್ಯದ ಜನತೆಗೆ ಸತ್ಯಾಂಶ ಗೊತ್ತಾಗಲಿಕ್ಕೆ ತಾವು 2 ವಿಚಾರಗಳ ಬಗ್ಗೆ ಸ್ಪಷ್ಟೀಕರಣವನ್ನು ಕೊಡಿ. ಮೊದಲನೆಯದು ಎಂದರೆ, ನೀವು ನೀರನ್ನು ಬಿಡುತ್ತೀರೋ ಆಥವಾ ಯಾವ ನೀರನ್ನು ನೀವು ಹಿಡಿದಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಅದು ಹೋಗುತ್ತಿದೆ ಎಂಬ ಅಂಶಕ್ಕೆ ಸಂಬಂಧಪಟ್ಟಂತೆ; ಮತ್ತು ಎರಡನೆಯದಾಗಿ ನಿಮ್ಮ ಇಂಟೇರಿಮ್ ಅರೇಂಜ್‌ಮೆಂಟ್ ಏನಾಗಿತ್ತು ಎಂಬುದನ್ನು ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ಆ ಎರಡು ಅಂಶಗಳನ್ನು ತಿಳಿಸಿಬಿಡಿ ಸಾಕು. ಮತ್ತೆ ಅದರ ಮೇಲೆ ನಾವು ಚರ್ಚೆ ಮಾಡಿ ಚರ್ವಿತಚರ್ವಣವನ್ನು ಮಾಡುವುದು ಬೇಡ.

ಶ್ರೀ ಕೆ.ಎನ್. ನಾಗೇಗೌಡ:- ಆಗಬಹುದು.

ಆಧ್ಯಕ್ಷರು:- ಯಾರಾದರೂ ಒಬ್ಬರು ಹೇಳಿ.

ಶ್ರೀ ಕೆ.ಎನ್. ನಾಗೇಗೌಡ:- ನಾನು ತಮಗೆ ಮೊದಲನೆಯದಾಗಿ ಒಂದು ವಿಚಾರವನ್ನು ಹೇಳುವುದಾದರೆ, ನಮ್ಮ ಕಬಿನಿ ಡ್ಯಾಂನಲ್ಲಿ ಎಷ್ಟು ನೀರನ್ನು ಇಟ್ಟುಕೊಳ್ಳುವುದಕ್ಕೆ ಶಕ್ತಿ ಇದೆ, ಆ ಡ್ಯಾಂನ ಕೆಪ್ಯಾಸಿಟಿ ಎಷ್ಟಿದೆ ಅಷ್ಟನ್ನು ಇಟ್ಟುಕೊಂಡು ಇನ್ನೂ ಹೆಚ್ಚಾದ ನ್ಯಾಚುರಲ್ ಆಗಿ ಹೋಗು-ವುದನ್ನು ಬಿಟ್ಟರೆ, ಕಾವೇರಿಯಲ್ಲಾಗಲಿ ಬೇರೆ ಎಲ್ಲೇ ಆಗಲಿ ನಾವು ಒಂದು ಹನಿಯನ್ನು ಬಿಟ್ಟಿಲ್ಲ. ಇನ್ನು ಇಂಟರಿಮ್ ಅರೆಂಜ್‌ಮೆಂಟ್ ಬಗ್ಗೆ ಈಗಾಗಲೇ ನಾವು ಸ್ಪಷ್ಟಮಾಡಿದ್ದೇವೆ, ಅದು ಇನ್ನೂ ಡಿಸ್ಕಷನ್ ಹಂತದಲ್ಲಿದೆ. ಇನ್ನು ಬೇರೆ ವಿಚಾರವೇ ಬೇಡ.

ಆಧ್ಯಕ್ಷರು:- ಈಗ ಮಾನ್ಯ ಶಿಕ್ಷಣ ಸಚಿವರು ಉತ್ತರವನ್ನು ನೀಡಬಹುದು. ನನಗೂ ಕೂಡ ಆರೋಗ್ಯ ಸರಿಯಾಗಿಲ್ಲ; ಇದರ ಜೊತೆಗೆ ಮಾನ್ಯ ಉಪಾಧ್ಯಕ್ಷರೂ ಕೂಡ ಇಲ್ಲ. ಆದ್ದರಿಂದ ಬೇಗ ಬೇಗ ಮುಗಿಸಿಬಿಡೋಣ.

ವಿತ್ತೀಯ ಕಾರ್ಯಕಲಾಪಗಳು

(ಇ) ವಿದ್ಯಾ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೆ, 1996-97ನೇ ಸಾಲಿನ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ ಅನುದಾನ ಬೇಡಿಕೆಗಳನ್ನು ಸದನವು ಅನುಮೋದನೆ ನೀಡಬೇಕೆಂದು ಕೋರುತ್ತೇನೆ. ಚರ್ಚೆಯ ಕಾಲದಲ್ಲಿ ಮಾನ್ಯ ಸದಸ್ಯರುಗಳು ನೀಡಿರುವ ಹಲವಾರು ಸಲಹೆ/ ಸೂಚನೆಗಳನ್ನು ಸ್ವಾಗತಿಸುತ್ತೇನೆ. ಇಲಾಖೆಯ ಪರಿ-ಣಾಮಕಾರಿ ಕಾರ್ಯನಿರ್ವಹಣೆಗೆ ನೆರವಾಗುವ ಎಲ್ಲಾ ಸಲಹೆಗಳನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಆಶ್ವಾಸನೆ ನೀಡುತ್ತೇನೆ.

ಮಾನವ ಸಂಪನ್ಮೂಲ ಅಭಿವೃದ್ಧಿಗೆ ನೆರವಾಗುವ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರಗಳು ಬಹಳ ವಿಸ್ತಾರವಾಗಿವೆ. ಸಾರ್ವಜನಿಕ ಶಿಕ್ಷಣ ಇಲಾಖೆಯು ಬೃಹತ್

ಇಲಾಖೆಯಾಗಿದ್ದು ರಾಜ್ಯದಲ್ಲಿ 41 ಸಾವಿರಕ್ಕೂ ಅಧಿಕ ಪ್ರಾಥಮಿಕ ಶಾಲೆಗಳಿದ್ದು ಒಂದರಿಂದ ಏಳು ತರಗತಿಗಳಲ್ಲಿ 79.00 ಲಕ್ಷಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದು 1 ಲಕ್ಷ 76 ಸಾವಿರಕ್ಕೂ ಹೆಚ್ಚು ಶಿಕ್ಷಕರು ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಮ್ಮ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಆದ್ಯತೆ ನೀಡುತ್ತಿದೆ.

ಸಾರ್ವತ್ರಿಕವಾಗಿ ಸೌಲಭ್ಯ ಕಲ್ಪನೆಯ ಅಂಗವಾಗಿ 200ಕ್ಕಿಂತ ಹೆಚ್ಚು ಜನ ಸಂಖ್ಯೆಯುಳ್ಳ ಗ್ರಾಮ ಅಥವಾ ಜನವಸತಿ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಯನ್ನು ಆರಂಭಿಸಲು ಕ್ರಮ ಕೈಗೊಂಡಿದೆ. 1995-96ನೇ ಸಾಲಿನಲ್ಲಿ 1264 ಕಿರಿಯ ಪ್ರಾಥಮಿಕ ಶಾಲೆಗಳನ್ನು ಶಾಲಾರಹಿತ ಪ್ರದೇಶಗಳಲ್ಲಿ ಆರಂಭಿಸಲಾಗಿದೆ. 1996-97ನೇ ಸಾಲಿನಲ್ಲಿ 1000 ಹೊಸ ಕಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗುವುದು.

ಇದರ ಜೊತೆಗೆ ಅಗತ್ಯವಿರುವ ಸ್ಥಳಗಳಲ್ಲಿ ಈಗ ಇರುವ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಮೇಲ್ದರ್ಜೆಗೇರಿಸಲೂ ಕ್ರಮ ಕೈಗೊಳ್ಳುತ್ತಿದ್ದು 1995-96ನೇ ಸಾಲಿನಲ್ಲಿ 1328 ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಪರಿವರ್ತಿಸಲಾಯಿತು. ಈ ಸಾಲಿನಲ್ಲಿ 1000 ಕಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗುವುದು.

ಹೊಸ ಹುದ್ದೆಗಳ ನಿರ್ಮಾಣ:

1995-96ನೇ ಸಾಲಿನಲ್ಲಿ 5000 ಅಧಿಕ ಪ್ರಾಥಮಿಕ ಶಿಕ್ಷಕರ ಹುದ್ದೆಗಳನ್ನು ಮತ್ತು 1996-97ರಲ್ಲಿ 5000 ಹೊಸ ಹುದ್ದೆಗಳನ್ನು ಸೃಜಿಸಲಾಗಿದೆ.

ಶಿಕ್ಷಕರ ನೇಮಕಾತಿ:

1995-96ನೇ ಸಾಲಿನಲ್ಲಿ 8725 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಯ್ತು. 1996-97ನೇ ಸಾಲಿನಲ್ಲಿ 18650 ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ನೀಡಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ಹುದ್ದೆಗಳನ್ನು 30.9.96ರ ಒಳಗೆ ಭರ್ತಿ ಮಾಡಲು ಕ್ರಮ ಕೈಗೊಂಡಿದೆ.

ಖಾಸಗಿ ಶಾಲೆಗಳಿಗೆ ಅನುಮತಿ:

ಖಾಸಗಿ ರಂಗದಲ್ಲಿ ಈ ವರ್ಷ 23 ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಿಗೆ ಮತ್ತು 99 ಆಂಗ್ಲ ಮಾಧ್ಯಮ ಶಾಲೆಗಳಿಗೆ ಐದನೆಯ ತರಗತಿಯಿಂದ ನಡೆಸಲು ಶಾಶ್ವತ ಅನುದಾನ ರಹಿತವಾಗಿ ಅನುಮತಿ ನೀಡಿದೆ.

ಹೊಸ ಪ್ರೌಢ ಶಾಲೆಗಳ ಆರಂಭ:

1995-96ನೇ ಸಾಲಿನಲ್ಲಿ ಆಯವ್ಯಯದ ಕೊರತೆಯಿಂದಾಗಿ ಯಾವುದೇ ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲಾಗಲಿಲ್ಲ. ಆದರೆ 85 ಖಾಸಗಿ ಪ್ರೌಢ ಶಾಲೆಗಳ ಪ್ರಾರಂಭಕ್ಕೆ ಶಾಶ್ವತ

ಅನುದಾನ ರಹಿತ ಷರತ್ತಿನ ಮೇಲೆ ಅನುಮತಿ ನೀಡಲಾಯ್ತು. 1996-97ನೇ ಸಾಲಿನಲ್ಲಿ ಶಾಲಾ ನಕ್ಷೆಯ ಆಧಾರದ ಮೇಲೆ **200** ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಆದೇಶ ಹೊರಡಿಸಿದೆ. ಜೊತೆಗೆ **208** ಖಾಸಗಿ ಆಡಳಿತ ಮಂಡಳಿಗಳಿಗೆ ಪ್ರೌಢ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಿದೆ.

ಪ್ರೌಢ ಶಾಲೆಗಳಿಗೆ ಶಿಕ್ಷಕರ ನೇಮಕಾತಿ:

ಸರ್ಕಾರಿ ಪ್ರೌಢ ಶಾಲೆಗಳಲ್ಲಿನ 2500 ಪ್ರೌಢ ಶಾಲಾ ಸಹ ಶಿಕ್ಷಕರ ಮತ್ತು ದೈಹಿಕ ಶಿಕ್ಷಕರುಗಳ ಹುದ್ದೆಗಳನ್ನು 31-8-96ರ ಒಳಗಾಗಿ ತುಂಬಲು ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. **ಈ ಬಾರಿಯಿಂದ ಪ್ರೌಢ ಶಾಲಾ ಶಿಕ್ಷಕರುಗಳ ನೇಮಕಾತಿಯಲ್ಲಿಯೂ ಶೇಕಡಾ 30 ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ.**

ಅನುದಾನಿತ ಶಾಲೆಗಳು:

ರಾಜ್ಯದಲ್ಲಿ 2303 ಅನುದಾನಿತ ಪ್ರಾಥಮಿಕ ಶಾಲೆಗಳು ಮತ್ತು 2605 ಅನುದಾನಿತ ಪ್ರೌಢ ಶಾಲೆಗಳಿವೆ. ಇವುಗಳ ಸಿಬ್ಬಂದಿ ವೇತನಕ್ಕಾಗಿ ಜಿಲ್ಲಾ ವಲಯದಡಿ ಕ್ರಮವಾಗಿ ರೂ. 92.42 ಕೋಟಿ ಮತ್ತು ರೂ. 226.78 ಕೋಟಿಗಳು ವೆಚ್ಚವಾಗುತ್ತಿದೆ.

1987-88ಕ್ಕೆ ಹಿಂದೆ ಪ್ರಾರಂಭವಾಗಿ ಅನುದಾನಕ್ಕೆ ಅರ್ಹವಾಗಿ ಇನ್ನೂ ಅನುದಾನಕ್ಕೆ ಒಳಪಡಿಸಬೇಕಾಗಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ 104 ಇದ್ದು ಅದರಲ್ಲಿ ಈ ಸಾಲಿನಲ್ಲಿ 26 ಪ್ರಾಥಮಿಕ ಶಾಲೆಗಳ 84 ಶಿಕ್ಷಕರನ್ನು ಅನುದಾನಕ್ಕೆ ಒಳಪಡಿಸಲಾಗಿದೆ. ಇನ್ನೂ 78 ಅರ್ಹ ಶಾಲೆಗಳು ಅನುದಾನಕ್ಕೆ ಒಳಪಡಬೇಕಾಗಿದ್ದು ಇದರಲ್ಲಿ 25 ಪರಿಶಿಷ್ಟ ಜಾತಿ, ಪಂಗಡಗಳ ಆಡಳಿತ ವರ್ಗಕ್ಕೆ ಸೇರಿದ ಶಾಲೆಗಳಿದ್ದು ಇವುಗಳನ್ನು ಅನುದಾನಕ್ಕೆ ಒಳಪಡಿಸಲು ರೂ. 156 ಲಕ್ಷಗಳ ಆರ್ಥಿಕ ಹಣದ ಅವಶ್ಯಕತೆ ಇದೆ.

ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ಒಟ್ಟು 90 ಪ್ರೌಢ ಶಾಲೆಗಳು ಅನುದಾನ ಪಡೆಯಲು ಅರ್ಹವಾಗಿದ್ದು ಅವುಗಳನ್ನು ಅನುದಾನಕ್ಕೆ ಒಳಪಡಿಸಲು ರೂ. 360 ಲಕ್ಷಗಳ ಅಧಿಕ ಹಣದ ಅವಶ್ಯಕತೆ ಇದೆ.

ಶಾಶ್ವತ ಅನುದಾನ ರಹಿತವಾಗಿ ಆರಂಭವಾಗಿರುವ 1813 ಪ್ರಾಥಮಿಕ ಶಾಲೆಗಳು ಮತ್ತು 2801 ಪ್ರೌಢ ಶಾಲೆಗಳಿದ್ದು ಸಧ್ಯದಲ್ಲಿ ಈ ಶಾಲೆಗಳಿಗೆ ಅನುದಾನ ನೀಡುವ ವಿಷಯ ಸರಕಾರದ ಪರಿಶೀಲನೆಯಲ್ಲಿ ಇಲ್ಲ.

ಮಾನ್ಯ ಶಿವರಾಮೇಗೌಡರು ಶಿಕ್ಷಣ ಒಂದು ಆಸ್ತಿ, ಗಾಳಿ ಬೆಳಕಿನಷ್ಟೇ ಅಗತ್ಯ ಎಂದು ಹೇಳಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರಃ ಎಂದೂ ಮಾನ್ಯ ಶ್ರೀರಾಮರೆಡ್ಡಿಯವರು ಶಿಕ್ಷಣವು ಸಮಾಜದ ಮೆದುಳು ಮತ್ತು ದೇಶದ ಆಸ್ತಿ

ಎಂದು ತಿಳಿಸಿದ್ದಾರೆ. ನಿಜಕ್ಕೂ ಈ ಮಾತುಗಳು ಸರ್ವಕಾಲಿಕ ಸತ್ಯ.

ಆದರೆ ಮಾತನಾಡಿದ ಎಲ್ಲಾ ಸದಸ್ಯರುಗಳು ಶಿಕ್ಷಣದ ಮಟ್ಟ ಕುಸಿಯುತ್ತಿದೆ, ಶಿಕ್ಷಣ ಕ್ಷೇತ್ರದಲ್ಲಿ ಸಿಲಬಸ್ ಎಂಬುದೇ ಇಲ್ಲ, ಇಲ್ಲಿ ಎಲ್ಲಾ ಕುಲಗೆಟ್ಟು ಹೋಗಿದೆ ಎಂದು ಸಾರಾಸಗಟಾಗಿ ತಿರಸ್ಕರಿಸುವುದು ಸರಿಯಲ್ಲ. ಒಂದೆಡೆ ನಮ್ಮ ರಾಜ್ಯದ ವಿದ್ಯಾರ್ಥಿಗಳು ವಿಶ್ವದ ಎಲ್ಲಾ ಅಭಿವೃದ್ಧಿ ಶೀಲ ರಾಷ್ಟ್ರಗಳ ಮಕ್ಕಳೊಂದಿಗೆ ಸ್ಪರ್ಧಿಸಲು ತಯಾರಾಗಬೇಕು ಎಂದೂ ಅದರ ಹಿಂದೆಯೇ ಮಕ್ಕಳು ಪುಸ್ತಕಗಳ ಹೊರೆ ಹೊರುವುದರಿಂದ ಬೋನ್ ಕ್ಯಾನ್ಸರ್ ಬರುತ್ತದೆಂದು ಹೇಳುವುದು ಎಷ್ಟು ವಿಪರ್ಯಾಸ. ಇಂದಿನ ಉದಾರೀಕರಣ ಸ್ಪರ್ಧಾ ಯುಗದಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳೂ ಹೊಸ ಸವಾಲುಗಳನ್ನು ಸಶಕ್ತವಾಗಿ ಎದುರಿಸಲು ಸಹಾಯಕವಾಗುವಂತಹ ಸಿಲಬಸ್‌ನ್ನು ಜಾರಿಗೆ ತಂದಿದೆ. ರಾಜ್ಯ ಮತ್ತು ರಾಷ್ಟ್ರದ ಇತಿಹಾಸವನ್ನು ಸತ್ಯ, ಸದಾಚಾರ, ಪ್ರೇಮ, ಅಹಿಂಸೆ ಮತ್ತು ಶಾಂತಿಯ ಮೌಲ್ಯಗಳು ಹಾಸುಹೊಕ್ಕಾಗಿರುವಂತೆ ಪಠ್ಯ ವಸ್ತು ರೂಪಿಸಿದೆ.

ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು, ಶಾಲಾ ಕಟ್ಟಡಗಳ ನಿರ್ಮಾಣ, ದುರಸ್ತಿ, ಉಪಕರಣಗಳ ಕೊರತೆಯ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ನಿಜ, ಇವು ಶಿಕ್ಷಣ ಪ್ರಸಾರಕ್ಕೆ ಅತ್ಯಗತ್ಯ ಘಟಕಗಳು. ಈ ಬಗ್ಗೆ ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದೇನೆಂದರೆ, ಸರ್ಕಾರ ಈ ಬಗ್ಗೆ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳುತ್ತಿದೆ. ಈ ವರ್ಷ 5,000 ಹೊಸದಾಗಿ ಶಿಕ್ಷಕರ ಹುದ್ದೆಗಳನ್ನು ಸೃಜಿಸಿದೆ. 18650 ಪ್ರಾಥಮಿಕ ಶಾಲಾ ಶಿಕ್ಷಕರು, 2500 ಪ್ರೌಢ ಶಾಲೆ ಶಿಕ್ಷಕರು, 864 ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಂಡಿದೆ. ಪ್ರಾಥಮಿಕ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ರೂ. 41.95 ಕೋಟಿಗಳನ್ನು, ದುರಸ್ತಿಗಾಗಿ ರೂ. 6.17 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಿದೆ. ಇದರಂತೆ ಪ್ರೌಢ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ರೂ. 5.04 ಕೋಟಿಗಳನ್ನು, ದುರಸ್ತಿಗಾಗಿ ರೂ. 2.02 ಕೋಟಿಗಳನ್ನು ಒದಗಿಸಿದೆ.

ಇದೇ ರೀತಿ ಅಗತ್ಯ ಉಪಕರಣಗಳನ್ನು ಪ್ರಾಥಮಿಕ ಶಾಲೆಗಳಿಗೆ ಒದಗಿಸಲು ರಾಜ್ಯ ಸರ್ಕಾರ ರೂ. 4.85 ಕೋಟಿಗಳನ್ನು ಒದಗಿಸಿದ್ದು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಡಿ ರೂ. 31.74 ಕೋಟಿಗಳನ್ನು 13 ಜಿಲ್ಲೆಗಳ 7935 ಹಿ.ಪ್ರಾಥಮಿಕ ಶಾಲೆಗಳಿಗೆ ಅಗತ್ಯ ಉಪಕರಣಗಳನ್ನು ಸರಬರಾಜು ಮಾಡಲು ಪಡೆದಿದೆ. ಇದರ ಬಗ್ಗೆ ವೆಚ್ಚ ಮಾಡಲು 30.9.96 ರವರೆಗೆ ವಿಸ್ತರಣೆ ಪಡೆಯಲಾಗಿದೆ. ಇದರ ಜೊತೆಗೆ ಕೇಂದ್ರ ಪುರಸ್ಕೃತ ಯೋಜನೆಗಳ ಪೂರ್ಣ ಪ್ರಯೋಜನ ಪಡೆಯಲಾಗುತ್ತಿದೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿಜ್ಞಾನ ಬೋಧನೆ ಉತ್ತಮಗೊಳಿಸಲು ರೂ. 492.34 ಲಕ್ಷಗಳ ಪ್ರಸ್ತಾವನೆಯನ್ನು ಮತ್ತು ಟೂ–ಇನ್–ಒನ್ ಉಪಕರಣಗಳ ಸರಬರಾಜಿಗೆ ಸಂಬಂಧಿಸಿದ ರೂ. 148 ಲಕ್ಷಗಳ ಕಾರ್ಯಕ್ರಮವನ್ನು ಈ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುವುದು.

ಚರ್ಚೆಯಲ್ಲಿ ಪಾಲ್ಗೊಂಡ ಬಹಳಷ್ಟು ಮಾನ್ಯ ಸದಸ್ಯರುಗಳು ಪ್ರೋತ್ಸಾಹಕರ ಯೋಜನೆಗಳ ಅದರಲ್ಲೂ ಸಮವಸ್ತ್ರ ಮತ್ತು ಮಧ್ಯಾಹ್ನ ಉಪಹಾರ ಕಾರ್ಯಕ್ರಮಗಳು ನಿಲ್ಲಿಸಲು ಸಲಹೆ ಮಾಡಿದ್ದಾರೆ. ಪ್ರೋತ್ಸಾಹಕರ ಕಾರ್ಯಕ್ರಮಗಳು ಮಗುವಿನ ಶಿಕ್ಷಣ ಪೋಷಕರಿಗೆ ಹೊರೆಯಾಗದಂತೆ ಮಾಡಲು ಸಹಾಯಕವಾಗುವುದು. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರೆ ಶಾಲೆಗೆ ಮಕ್ಕಳು ನಿಯಮಿತವಾಗಿ ಬರಲು ಸಹಕಾರಿಯಾಗುವುದು ಎಂದು ಸರ್ಕಾರ ನಂಬಿದೆ. ಸಮವಸ್ತ್ರಗಳ ಸರಬರಾಜಿಗೆ ಸಂಬಂಧಿಸಿದಂತೆ ಹಿಂದಿನ ಸಾಲಿನಲ್ಲಿ ಸ್ವಲ್ಪ ಗೊಂದಲ ಉಂಟಾಯಿತು. ಸರ್ಕಾರವು ಬಟ್ಟೆಗಳನ್ನು ಹೊಲಿಸುವ ಹೊಣೆಯನ್ನು ಪೋಷಕರಿಗೇ ವಹಿಸುವ ನಿರ್ಧಾರ ಕೈಗೊಳ್ಳುವ ಹೊತ್ತಿಗೆ ಕೈಮಗ್ಗ ಅಭಿವೃದ್ಧಿ ನಿಗಮದವರು ಬಟ್ಟೆಗಳನ್ನು ಕತ್ತರಿಸಿ ಸರಬರಾಜು ಮಾಡಿದ್ದರು. ಹೊಲಿದ ಬಟ್ಟೆಗಳನ್ನು ಸಕಾಲದಲ್ಲಿ ಹಂಚಲಾಗುತ್ತಿರಲಿಲ್ಲ. ವರ್ಷದ ಕೊನೆಯವರೆಗೂ ಮಕ್ಕಳಿಗೆ ತಲುಪುತ್ತಿರಲಿಲ್ಲ. ಬಟ್ಟೆಯ ಗುಣಮಟ್ಟವು ಸರಿಯಾಗಿಲ್ಲದೆ ಅವು ಮಕ್ಕಳ ಆಳತೆಗೆ ತಕ್ಕಂತಿರಲಿಲ್ಲ. ಈ ವರ್ಷ ಅಂಗಿ ಮತ್ತು ಕುಪ್ಪಸದ ಬಟ್ಟೆಗೆ ಹ್ಯಾಂಡ್ ಲೂಂ ಪಾಲಿಯಸ್ಟರ್ ಬಟ್ಟೆ ನೀಡಲು ನಿರ್ಧರಿಸಿದೆ. ಇಲ್ಲಿ ಇಲಾಖೆಗೆ ಸರಬರಾಜುದಾರರು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವೇ ಹೊರತು ಬೇರೆ ಯಾವ ವ್ಯಕ್ತಿಗೂ ಬಟ್ಟೆ ಸರಬರಾಜು ಗುತ್ತಿಗೆ ನೀಡುತ್ತಿಲ್ಲ. ಈ ವರ್ಷ ಸೆಪ್ಟೆಂಬರ್ ಅಂತ್ಯದ ಒಳಗೆ ಬಟ್ಟೆ ಸರಬರಾಜು ಮಾಡಲು ಕ್ರಮ ಕೈಗೊಂಡಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ತಿಳಿಸಿದಂತೆ ಖಾದಿ ಬಟ್ಟೆ ಒದಗಿಸುವ ಬಗ್ಗೆ, ವಿಷಯ ಸಮಿತಿಯು ಖಾದಿ ಪಾಲಿಯಸ್ಟರ್ ಬಟ್ಟೆ ನೀಡಲು ಶಿಫಾರಸ್ಸು ಮಾಡಿದ್ದು ಈ ಬಗ್ಗೆ ಸರ್ಕಾರ ಮುಂದಿನ ವರ್ಷದ ವೇಳೆಗೆ ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳುವುದು.

ಮಾನ್ಯ ವಿಶ್ವೇಶ್ವರ ಹೆಗಡೆಯವರು ತಿಳಿಸಿರುವಂತೆ ಸದ್ಯ ಹಾಲು, ಮೊಟ್ಟೆ, ಬಾಳೆಹಣ್ಣು ನೀಡುವ ಯಾವುದೇ ಪ್ರಸ್ತಾಪ ಸರ್ಕಾರದ ಮುಂದಿಲ್ಲ.

ಇನ್ನು ಮಧ್ಯಾಹ್ನ ಉಪಹಾರ ಯೋಜನೆ ಕುರಿತಂತೆ ರಾಷ್ಟ್ರ ವ್ಯಾಪ್ತಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ 'ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಟಿಕತೆಯ ಬೆಂಬಲ' ಕಾರ್ಯಕ್ರಮವನ್ನು ರಾಜ್ಯದಲ್ಲಿ ಈಗ ಅನುಷ್ಠಾನಗೊಳಿಸುತ್ತಿದ್ದು, ಆ ಕಾರ್ಯಕ್ರಮ ಜಾರಿಯಲ್ಲಿಲ್ಲದ ತಾಲ್ಲೂಕುಗಳಲ್ಲಿ ಮಾತ್ರ ರಾಜ್ಯ ಬೆಂಬಲಿತ ಕಾರ್ಯಕ್ರಮದಡಿ ತಿಂಗಳಿಗೊಂದು ಕೆ.ಜಿ. ಗೋಧಿ ಹಿಟ್ಟು–ರವೆ, ಸಿದ್ಧಪಡಿಸಿದ ಆಹಾರ ನೀಡಲಾಗುತ್ತಿದೆ. ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗುತ್ತಿದೆ.

ಖಾಸಗಿ ಶಾಲೆಗಳು ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸಿವೆ ಎಂಬ ಬಗ್ಗೆ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರುವ ಕಳವಳದ ಬಗ್ಗೆ ಸರ್ಕಾರ ಈ ದಿಸೆಯಲ್ಲಿ ಕಾರ್ಯೋನ್ಮುಖವಾಗಿದೆ. ನಗರ ಪ್ರದೇಶದ ಕೆಲವು ಖಾಸಗಿ ಶಾಲೆಗಳಲ್ಲಿ ದುಬಾರಿ ವಂತಿಗೆ ವಸೂಲಿ ಮಾಡುತ್ತಿರುವ ಪ್ರವೃತ್ತಿಗೆ ಕಡಿವಾಣ ಹಾಕಲು ನಿರ್ಧರಿಸಿದ್ದು ಈಗ ಶಿಕ್ಷಣ ಕಾಯ್ದೆಗೆ ನಿಯಮಾವಳಿಗಳು ರಚಿತವಾಗುತ್ತಿದ್ದು ಆದರಲ್ಲಿ ನಿಗದಿತ ಶುಲ್ಕ ವಸೂಲಿಗೆ ಮಾತ್ರ ಅವಕಾಶ ಕಲ್ಪಿಸಲಾಗುತ್ತಿದೆ. ಫಲಿತಾಂಶ ಕಡಿಮೆ ಬರುವ ಶಾಲೆಗಳ ಶಿಕ್ಷಕರುಗಳನ್ನು ಹೊಣೆಗಾರರನ್ನಾಗಿ ಮಾಡುವ ಬಗ್ಗೆ ಮಾನ್ಯ ಸದಸ್ಯರುಗಳು ಸೂಚಿಸಿದ್ದು, ಇದಕ್ಕಾಗಿ ಎಲ್ಲಾ ಸರ್ಕಾರಿ

ಶಾಲೆಗಳನ್ನು ಕಡ್ಡಾಯವಾಗಿ ತಪಾಸಣೆ ಮಾಡಲು ಎಲ್ಲಾ ಹಂತದ ಅಧಿಕಾರಿಗಳಿಗೆ ಸೂಚಿಸಿದೆ. ತಪಾಸಣಾ ನಮೂನೆಗಳನ್ನು ಪರಿಷ್ಕರಿಸಿ ಒದಗಿಸಿದೆ.

ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪರೀಕ್ಷೆಗಳಲ್ಲಿನ ಮೌಲ್ಯ ಮಾಪನದ ಲೋಪದೋಷಗಳ ಬಗ್ಗೆ ಹೇಳುವುದಾದರೆ, ಈಗ ಸುರೇಂದ್ರನಾಥ್ ಸಮಿತಿ ನೀಡುವ ವರದಿಯ ಆಧಾರದ ಮೇಲೆ ಪರೀಕ್ಷೆ-ಗಳಲ್ಲಿ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಆದರೆ ಈ ಹಂತದಲ್ಲಿ ಓಪನ್ ಬುಕ್ ಸಿಸ್ಟಮ್ ತರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಮನೆ ಪಾಠದ ಪಿಡುಗನ್ನು ತಪ್ಪಿಸುವ ಮಾರ್ಗೋಪಾಯಗಳ ಬಗ್ಗೆ ತೀವ್ರವಾಗಿ ಪರಿಶೀಲಿಸ-ಲಾಗುತ್ತಿದೆ.

ಶ್ರೀ ಜಯವಂತ್‌ರವರು ಕಡಿಮೆ ಮಕ್ಕಳು ಇರುವ ಶಾಲೆಗಳ ಅವಶ್ಯಕತೆ ಬಗ್ಗೆ ಅಧ್ಯಯನ ಮಾಡಲು ತಿಳಿಸಿದ್ದು ಈಗ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಗೊಳಿಸುವ ಬಗ್ಗೆ ಸಮಯಬದ್ಧ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದ್ದು ಅಗತ್ಯವಿರುವ ಕಡೆಗಳಲ್ಲಿ ಶಾಲೆಗಳ ಆರಂಭಕ್ಕೆ ಒತ್ತು ನೀಡ-ಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್‌ರವರು ತಿಳಿಸಿರುವಂತೆ ಎಲ್ಲಾ ಉರ್ದು ಅಥವಾ ಅಲ್ಪಸಂಖ್ಯಾತ ಭಾಷಾ ಮಾಧ್ಯಮ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆಯವರು ಇಲಾಖಾ ಪುನರ್ರಚನೆ ಬಗ್ಗೆ ಹೇಳುತ್ತಾ, ಏ.ಇ.ಓ. ಜೊತೆಗೆ ಬಿ.ಇ.ಓ. ಏಕೆ ಎಂದಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಮತ್ತು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ಉಸ್ತುವಾರಿಗಾಗಿ ಇಲಾಖಾ ಪುನರ್ರಚಿಸಿ ಹಂತ ಹಂತವಾಗಿ ತಾಲ್ಲೂಕು ಅಧಿಕಾರಿಗಳಿಗೆ ವಾಹನ ಒದಗಿಸುವ ವ್ಯವಸ್ಥೆ ಮಾಡಿದೆ.

ಈ ಪುನರ್ರಚನೆ ಅನಿವಾರ್ಯವಾಗಿತ್ತು ಏನೆಂದರೆ ಇಂದು ಪ್ರತಿಯೊಂದು ಮಗುವಿಗೂ ಶಿಕ್ಷಣ ನೀಡಲು ಶಾಲೆಗಳನ್ನು ಸ್ಥಾಪಿಸಿ ವ್ಯವಸ್ಥೆ ಮಾಡಿರುವ ಹಿನ್ನೆಲೆಯಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚಿನ ಪ್ರಾಥಮಿಕ ಶಿಕ್ಷಕರು, 45 ಸಾವಿರಕ್ಕೂ ಮೀರಿದ ಹೈಸ್ಕೂಲ್ ಶಿಕ್ಷಕರು ಇವರೆಲ್ಲರೂ ತಮ್ಮ ಕರ್ತವ್ಯ-ವನ್ನು ಸೂಕ್ತವಾಗಿ ನಿರ್ವಹಿಸಬೇಕಾದರೆ ಅವರ ಮೇಲೆ ಉಸ್ತುವಾರಿ ಮಾರ್ಗದರ್ಶನ ಅತ್ಯಗತ್ಯ.. (ಆದಕಾರಣ ಪುನರ್ ರಚನೆ ಕೇವಲ ಅಧಿಕಾರಿಗಳಿಗೆ ಬಡ್ತಿ ನೀಡುವುದಕ್ಕಾಗಿ ಮಾತ್ರ ಮಾಡಿಲ್ಲ)

ಮಾನ್ಯ ಚಿಮ್ಮನಕಟ್ಟಿಯವರು ಕೇಂದ್ರ ಪುರಸ್ಕೃತ ಯೋಜನೆಗಳಡಿ ಹಣದ ಬಳಕೆ ಸರಿಯಾಗಿ ಆಗಬೇಕೆಂದು ತಿಳಿಸಿದ್ದಾರೆ.

ಕೇಂದ್ರ ಪುರಸ್ಕೃತ ಯೋಜನೆಯಾದ ಕ್ಲಾಸ್ ಪ್ರಾಜೆಕ್ಟ್‌ನಡಿಯಲ್ಲಿ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಕಂಪ್ಯೂಟರ್ ಒದಗಿಸುವ ವಿಚಾರದಲ್ಲಿ ಈವರೆಗೆ ಕೇಂದ್ರ ಸರ್ಕಾರ ಹಾರ್ಡ್‌ವೇರ್ ಒದಗಿಸುವ ಮತ್ತು ರಾಜ್ಯ ಸರ್ಕಾರ ಸಾಫ್ಟ್‌ವೇರ್ ಒದಗಿಸುವ ಕರಾರಿತ್ತು. ಸಾಫ್ಟ್-

ವೇರ್ ಅಂದರೆ ಬೋಧನಾ ಪ್ಯಾಕೇಜ್ ಒದಗಿಸುವ ಬಗ್ಗೆ ರಾಜ್ಯ ಸರ್ಕಾರ ಏಜೆನ್ಸಿ ನಿಗದಿ ಮಾಡಿದೆ. ಆದರೆ ಹಾರ್ಡ್‌ವೇರ್ ಅಂದರೆ ಕಂಪ್ಯೂಟರ್ ಉಪಕರಣಗಳನ್ನು ಒದಗಿಸುವ ಬಗ್ಗೆ ಕೇಂದ್ರ ಸರ್ಕಾರ ವಿಳಂಬ ಮಾಡಿತು. ಇದರಲ್ಲಿ ರಾಜ್ಯ ಸರ್ಕಾರದಿಂದ ಯಾವುದೇ ತಡ ಆಗಿಲ್ಲ. ಈಗ ಕೇಂದ್ರ ಸರ್ಕಾರವು ಕಂಪ್ಯೂಟರ್ ಕೊಳ್ಳುವ ವಿಷಯವನ್ನು ರಾಜ್ಯ ಸರ್ಕಾರದ ವಿವೇಚನೆಗೇ ಬಿಟ್ಟಿರುವುದರಿಂದ ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಮೊದಲನೆಯ ಹಂತದಲ್ಲಿ 14 ಜಿಲ್ಲೆಗಳ 155 ಶಾಲೆಗಳಲ್ಲಿ ಈ ಕಾರ್ಯಕ್ರಮ ಜಾರಿಯಾಗುತ್ತಿದೆ. ಕ್ಲಾಸ್ ಪ್ರಾಜೆಕ್ಟ್ ಅಡಿ ಇನ್ನೂ 100 ಶಾಲೆಗಳಿಗೆ ಕಂಪ್ಯೂಟರ್ ಒದಗಿಸುವ ರೂ. 280 ಲಕ್ಷಗಳ ಪ್ರಸ್ತಾವನೆಯನ್ನು ಎರಡನೆಯ ಹಂತದಲ್ಲಿ ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಕೇಂದ್ರ ಸರ್ಕಾರದ ಯೋಜನೆಗಳ ಪೂರ್ಣ ಪ್ರಯೋಜನವನ್ನು ಪಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮಾನ್ಯ ಪುಟ್ಟಣ್ಣಯ್ಯನವರು ದೈಹಿಕ ಶಿಕ್ಷಕರ ನೇಮಕಕ್ಕೆ ಒತ್ತಾಯ ಮಾಡಿದ್ದಾರೆ. ಸಧ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಏಳು ಹುದ್ದೆಗಳು ಮಂಜೂರಾಗಿದ್ದಲ್ಲಿ ಏಳನೆಯ ಹುದ್ದೆಯನ್ನು ದೈಹಿಕ ಶಿಕ್ಷಕರ ಹುದ್ದೆಯಾಗಿ ನಿಗದಿಪಡಿಸಲಾಗುತ್ತಿದೆ. ಆರೋಗ್ಯ, ಕ್ರೀಡೆ, ಸಮಾಜದ ವಿಚಾರಧಾರೆ ಇವುಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿ, ಕ್ರೀಡೆಗೆ ಆದ್ಯತೆ ನೀಡಲು ಶಿಕ್ಷಕರಿಗೆ ಸೇವಾ ನಿರತ ತರಬೇತಿ ಕಾರ್ಯಕ್ರಮಗಳಲ್ಲಿ ತರಬೇತಿ ನೀಡಲು ಪ್ರಯತ್ನಿಸಲಾಗುವುದು.

ಮೊರಾರ್ಜಿ ದೇಸಾಯಿ ಸನಿವಾಸ ಶಾಲೆಗಳಲ್ಲಿ ಬಡ ಕುಟುಂಬಗಳಿಂದ ಬಂದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲು ಆದೇಶಿಸಿದೆ. ಹಿಂದಿನ ವರ್ಷದಲ್ಲಿ ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ 29 ವರ್ಷ ವಯೋಮಿತಿ ಮೀರಿದ ಅಭ್ಯರ್ಥಿಗಳಿಗೇ ನೇಮಕಾತಿಯಲ್ಲಿ ಆಧ್ಯತೆ ನೀಡಿದ್ದು 8725 ಶಿಕ್ಷಕರನ್ನು ನೇಮಿಸಲಾಗಿದೆ. ಈಗಿನ ನೇಮಕಾತಿ ಪ್ರಕ್ರಿಯೆಯಲ್ಲಿಯೂ ಅವರನ್ನೂ ಪರಿಗಣಿಸಲಾಗುತ್ತಿದೆ. ಆದರೆ ಕೇವಲ ಅವರನ್ನೇ ಪರಿಗಣಿಸಿದಲ್ಲಿ 29 ವರ್ಷಕ್ಕಿಂತ ಕಡಿಮೆ ವಯೋಮಿತಿಯಲ್ಲಿರುವ ಅಭ್ಯರ್ಥಿಗಳ ಆಯ್ಕೆ ಕಷ್ಟವಾಗುವುದರಿಂದ ಈ ನೇಮಕಾತಿಯಲ್ಲಿ ಅವರಿಗೇ ಹುದ್ದೆಗಳನ್ನು ಮೀಸಲು ಮಾಡಲಾಗದು.

ಮಾನ್ಯ ವಿಜಯಕುಮಾರ್ ಖಂಡ್ರೆಯವರು ಶಿಕ್ಷಕರ ನೇಮಕಾತಿಯು ತ್ವರಿತವಾಗಿ ಆಗಬೇಕು, ಬೀದರ್ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ಇದೆ ಎಂದು ತಿಳಿಸಿದ್ದು, ಹಿಂದಿನ ಎರಡು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ 270 ಹೆಚ್ಚುವರಿ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿದೆ. 1995-96ನೇ ಸಾಲಿನಲ್ಲಿ 372 ಶಿಕ್ಷಕರನ್ನು ನೇಮಕಾತಿ ಮಾಡಿದೆ. ಈ ವರ್ಷ 814 ಶಿಕ್ಷಕರ ಹುದ್ದೆಗಳನ್ನು ತುಂಬಲಾಗುತ್ತಿದೆ. ಶಿಕ್ಷಣ ಮಾಹಿತಿಯನ್ನು ಗಣಕೀಕರಣಗೊಳಿಸುವ ಸಲುವಾಗಿ ಜಿಲ್ಲೆಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲು ಕ್ರಮ ಕೈಗೊಂಡಿದೆ. ಪ್ರೌಢ ಶಾಲೆಗಳಿಗೆ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಾನ್ಯ ಸುರೇಶ್‌ಕುಮಾರ್‌ರವರು ತಿಳಿಸಿರುವಂತೆ ಹೋದ ವರ್ಷ ಪ್ರೌಢ ಶಾಲಾ ಶಿಕ್ಷಕರುಗಳ ನೇಮಕಾತಿಯನ್ನು ಮಾಡಲಾಗಲಿಲ್ಲ. ಆದರೆ ಈ ವರ್ಷ ಈಗಾಗಲೇ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು 2500 ಶಿಕ್ಷಕರ ಹುದ್ದೆಗಳನ್ನು ತುಂಬಲಾಗುತ್ತಿದೆ. ಇದರಲ್ಲಿ 650 ವಿಜ್ಞಾನ ಶಿಕ್ಷಕರ ಹುದ್ದೆಗಳೂ ಇವೆ. ನೇಮಕಾತಿ ಪ್ರಕ್ರಿಯೆ 30.9.96ರ ಒಳಗೆ ಪೂರ್ಣಗೊಳ್ಳಲಿದೆ. ಈ ಶಿಕ್ಷಕರು ಶಾಲೆಗೆ ಹಾಜರಾದನಂತರ ದೈಹಿಕ ಶಿಕ್ಷಕರು ಭೌತಶಾಸ್ತ್ರ ಬೋಧಿಸುವ ಪ್ರಸಂಗವಿರುವುದಿಲ್ಲ.

ಮಾನ್ಯ ಶ್ಯಾಮನೂರು ಶಿವಶಂಕರಪ್ಪನವರು ಹೇಳಿರುವಂತೆ, ಕೆಲವು ಮಠಗಳ ವತಿಯಿಂದ ಪ್ರಾರಂಭವಾಗಿರುವ ಶಾಲೆಗಳು ಒಳ್ಳೆಯ ಕೆಲಸ ಮಾಡುತ್ತಿವೆ. ಆದರೆ ಬಹುತೇಕ ಖಾಸಗಿ ಶಾಲೆಗಳು ಅದರಲ್ಲೂ ನಗರ ಪ್ರದೇಶದ ಶಾಲೆಗಳು ದುಬಾರಿ ವಂತಿಗೆ ವಸೂಲಿ ಮಾಡುತ್ತಿರುವ ಪ್ರವೃತ್ತಿಗೆ ಕಡಿವಾಣ ಹಾಕಲು ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಸೂಕ್ತ ನಿಯಮಾವಳಿಗಳನ್ನು ರೂಪಿಸಲಾಗುತ್ತಿದೆ.

ಕನಿಷ್ಠ ಕಲಿಕಾ ಸಾಮರ್ಥ್ಯಗಳು:

ಶಾಲಾ ಸೌಲಭ್ಯ ಕಲ್ಪನೆ ಮತ್ತು ಮಕ್ಕಳು ನಿರಂತರವಾಗಿ ಶಾಲೆಗಳಿಗೆ ಬರುವಂತೆ ಮಾಡುವುದರ ಜೊತೆಗೆ ಮಕ್ಕಳು ಪೂರ್ವ ನಿರ್ಧಾರಿತ ಕಲಿಕಾ ಸಾಮರ್ಥ್ಯಗಳಲ್ಲಿ ಪ್ರಭುತ್ವ ಹೊಂದುವುದು ಅವಶ್ಯಕ. ಇದಕ್ಕಾಗಿ ರಾಜ್ಯದ ಆಯ್ದ 2000 ಶಾಲೆಗಳಲ್ಲಿ ಈ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ. ಈ ಶಾಲೆಗಳ ಜೊತೆಗೆ ಡಿ.ಪಿ.ಇ.ಪಿ. ಅಡಿಯ ನಾಲ್ಕು ಜಿಲ್ಲೆಗಳ ಎಲ್ಲಾ ಶಾಲೆಗಳಲ್ಲಿ 1 ಮತ್ತು 2ನೆಯ ತರಗತಿಗಳಿಗೆ ಹೊಸ ಮಾದರಿಯ ಕಲಿಕಾ ಸಾಮರ್ಥ್ಯ ಆಧಾರಿತ ಪಠ್ಯ ಪುಸ್ತಕಗಳನ್ನು ಈ ಸಾಲಿನಿಂದ ಅಳವಡಿಸಿದ್ದು ಇದರಲ್ಲಿ ಮಕ್ಕಳ ಅಭ್ಯಾಸ ಪುಸ್ತಿಕೆಗಳು ಮತ್ತು ಶಿಕ್ಷಕರ ಕೈಪಿಡಿಗಳನ್ನು ತಯಾರಿಸಿ ಒದಗಿಸಿದೆ. ಈ ಪದ್ಧತಿಯನ್ನು ಹಂತಹಂತವಾಗಿ ಮುಂದಿನ ತರಗತಿಗಳಿಗೂ ವಿಸ್ತರಿಸುವ ಯೋಜನೆಯಿದ್ದು, ಇದು ಸಂಪೂರ್ಣವಾಗಿ ಜಾರಿಗೆ ಬಂದಲ್ಲಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ಉತ್ತಮವಾಗುವುದೆಂದು ಆಶಿಸಿದೆ.

ಶಾಲೆಗಳ ಕಡ್ಡಾಯ ಮತ್ತು ವ್ಯಾಪಕ ತಪಾಸಣೆ:

ವಿದ್ಯಾರ್ಥಿಗಳ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸಲು ಅನುಷ್ಠಾನಗೊಳ್ಳುತ್ತಿರುವ ಇಲಾಖಾ ಕಾರ್ಯಕ್ರಮಗಳು ಪರಿಣಾಮಕಾರಿಯಾಗುವಂತೆ ಮಾಡಲು ಮತ್ತು ಶಿಕ್ಷಕರುಗಳ ಸಮರ್ಪಕ ಹಾಜರಾತಿ ಹಾಗೂ ಅವರು ನಿಗದಿತ ರೂಪದಲ್ಲಿ ಬೋಧನಾ ಕಾರ್ಯದಲ್ಲಿ ನಿರತರಾಗಿರುವುದರ ಬಗ್ಗೆ ನಿಗಾ ಇಡಲು ಶಾಲೆಗಳ ತನಿಖೆ ಮತ್ತು ಸಂದರ್ಶನ ಕಾರ್ಯಗಳು ಅತ್ಯಾವಶ್ಯಕ. ಈ ದಿಸೆಯಲ್ಲಿ,

ಅ) ಬ್ಲಾಕ್ ಮಟ್ಟದ ಅಧಿಕಾರಿಗಳಿಗೆ ಹಂತಹಂತವಾಗಿ ವಾಹನ ಒದಗಿಸುವ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು ಕಳೆದೆರಡು ವರ್ಷಗಳಲ್ಲಿ 60 ತಾಲ್ಲೂಕುಗಳಿಗೆ ಜೀಪ್ ನೀಡಿದ್ದು ಈ ಸಾಲಿನಲ್ಲಿ ಇನ್ನೂ 50 ಜೀಪುಗಳನ್ನು ನೀಡಲು ಕ್ರಮ ಕೈಗೊಂಡಿದೆ.

ಆ) ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳನ್ನು ಅದರಲ್ಲೂ ವಿಶೇಷವಾಗಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವರ್ಷದಲ್ಲಿ ಒಂದು ಬಾರಿ ವಿವರವಾದ ತನಿಖೆ ಮತ್ತು ಕನಿಷ್ಠ ಎರಡು ಬಾರಿ ಸಂದರ್ಶನ ನೀಡುವುದನ್ನು ಅಧಿಕಾರಿಗಳಿಗೆ ಕಡ್ಡಾಯ ಮಾಡಿ ಈಗಾಗಲೇ ಆದೇಶ ಹೊರಡಿಸಿದೆ. ಶಾಂತಯ್ಯ ಸಮಿತಿಯ ಶಿಫಾರಸ್ಸಿನಂತೆ ತನಿಖೆ ಮತ್ತು ಸಂದರ್ಶನ ನಮೂನೆಗಳ ಶೈಕ್ಷಣಿಕ ಚಟುವಟಿಕೆಗಳ ಒತ್ತು ಕೊಟ್ಟು ಪರಿಷ್ಕೃತಗೊಳಿಸಿದೆ.

ಈ ಕಾರ್ಯಕ್ರಮಗಳಿಂದ ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ.

ಏಳನೆಯ ತರಗತಿಗೆ ಪಬ್ಲಿಕ್ ಪರೀಕ್ಷೆ:

ಈ ಬಗ್ಗೆ ಪರ ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿದ್ದರೂ ಎಂಟನೆಯ ತರಗತಿಗೆ ಬರುವ ಮಕ್ಕಳ ಶೈಕ್ಷಣಿಕ ಗುಣಮಟ್ಟ ನಿರೀಕ್ಷಿತ ಹಂತದಲ್ಲಿರಲಿಲ್ಲವಾದ್ದರಿಂದ ಈ ಸಾಲಿನಿಂದ ಏಳನೆಯ ತರಗತಿಯ ಪರೀಕ್ಷೆಯನ್ನು ಪಬ್ಲಿಕ್ ಪರೀಕ್ಷೆಯಾಗಿ ನಡೆಸಲು ನಿರ್ಧರಿಸಲಾಗಿದೆ. ಆದರೆ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಮಾಡುವ ಸಲುವಾಗಿ 'ಸೇತುಬಂಧ' ಕಾರ್ಯಕ್ರಮವನ್ನು ರೂಪಿಸಿ ಇದನ್ನು ನಡೆಸಲು ಶಿಕ್ಷಕರುಗಳಿಗೆ ತರಬೇತಿಯನ್ನು ನೀಡಲಾಗಿದೆ. ಇದರಿಂದ ಶಿಕ್ಷಕರುಗಳು ಬೋಧನೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗಿ ಮಕ್ಕಳ ಕಲಿಕಾ ಸಾಮರ್ಥ್ಯ ಉತ್ತಮವಾಗುವುದು.

ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪಬ್ಲಿಕ್ ಪರೀಕ್ಷೆಗಳು:

ಶ್ರೀ ಸುರೇಂದ್ರನಾಥ್ ಸಮಿತಿಯು ತನ್ನ ಮಧ್ಯಂತರ ವರದಿಯಲ್ಲಿ ಮಾಡಿದ ಶಿಫಾರಸ್ಸಿನ ಆಧಾರದ ಮೇಲೆ ಈ ಪರೀಕ್ಷೆಗಳಲ್ಲಿ ನಡೆಯುತ್ತಿದ್ದ ಸಾಮೂಹಿಕ ನಕಲು ಮುಂತಾದ ಅವ್ಯವಹಾರಗಳನ್ನು ತಡೆಗಟ್ಟಲು ಸೂಕ್ಷ್ಮ ಕೇಂದ್ರಗಳಿಗೆ ವೀಕ್ಷಕರುಗಳನ್ನು ನೇಮಿಸಲಾಗಿತ್ತು. ಪರೀಕ್ಷಾ ದುರ್ವ್ಯವಹಾರಗಳು ಬಹುತೇಕ ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಮೌಲ್ಯಮಾಪನ ವಿಷಯದಲ್ಲಿ ಬಹಳಷ್ಟು ದೂರುಗಳು ಬಂದಿವೆ. ಮೌಲ್ಯಮಾಪನ ಸರಿಯಾಗಿ ನಡೆದಿಲ್ಲವೆಂದು ವಿಧಾನ ಮಂಡಲದಲ್ಲಿಯೂ ಮಾನ್ಯ ಸದಸ್ಯರುಗಳು ದೂರಿದ್ದಾರೆ. ಸದ್ಯದ ವ್ಯವಸ್ಥೆಯಲ್ಲಿ ಮರು ಮೌಲ್ಯಮಾಪನಕ್ಕೆ ಅವಕಾಶವಿಲ್ಲ. ಕೇವಲ ಮರು ಎಣಿಕೆಗೆ ಮಾತ್ರ ಅವಕಾಶ ಇದೆ. ಆದಾಗ್ಯೂ ಇಂತಹ ದೂರುಗಳನ್ನು ಖುದ್ದಾಗಿ ಪರಿಶೀಲಿಸಲು ಅಧಿಕಾರಿಗಳಿಗೆ ಆದೇಶ ನೀಡಿದ್ದು ಅದರಂತೆ ಬಹಳಷ್ಟು ಪ್ರಕರಣಗಳಲ್ಲಿ ಮರು ಎಣಿಕೆಯಲ್ಲಿ ವ್ಯತ್ಯಾಸವಿಲ್ಲದಿರುವುದನ್ನು ಗಮನಿಸಲಾಗಿದೆ. ಐದು ಅಂಕಗಳ ಅಥವಾ ಹೆಚ್ಚು ವ್ಯತ್ಯಾಸ ಮರು ಎಣಿಕೆಯಲ್ಲಿ ಕಂಡು ಬಂದ ಪ್ರಕರಣಗಳಲ್ಲಿ ಸಂಬಂಧಿಸಿದ ಮೌಲ್ಯ ಮಾಪಕರ ವಿರುದ್ಧ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆ.

ಮುಂದಿನ ಸಾಲಿನಿಂದ ಈ ಪರೀಕ್ಷೆಗಳ ಮೌಲ್ಯಮಾಪನ ಜನರ ವಿಶ್ವಾಸಾರ್ಹತೆಯನ್ನು ಗಳಿಸುವ ದೃಷ್ಟಿಯಿಂದ ಅಗತ್ಯ ಮಾರ್ಪಾಟುಗಳನ್ನು ಮಾಡಲೂ ಉದ್ದೇಶಿಸಿದೆ.

ಶ್ರೀ ಮೊರಾರ್ಜಿ ದೇಸಾಯಿ ಸನಿವಾಸ ಶಾಲೆಗಳು:

1995-96ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ತಲಾ ಒಂದೊಂದು ಶ್ರೀ ಮೊರಾರ್ಜಿ ದೇಸಾಯಿ ಸನಿವಾಸ ಶಾಲೆಯನ್ನು ಪ್ರಾರಂಭಿಸಲಾಗಿದೆ. ಈ ಶಾಲೆಗಳಲ್ಲಿ ತರಗತಿ 5 ರಿಂದ 10 ವರೆವಿಗೆ ವ್ಯಾಸಂಗ ಮಾಡಲು ಅವಕಾಶವಿರುತ್ತದೆ. 1995-96ನೇ ಸಾಲಿನಲ್ಲಿ ಪ್ರಾರಂಭಿಕವಾಗಿ 5ನೇ ತರಗತಿಯನ್ನು ಪ್ರಾರಂಭಿಸಲಾಗಿದ್ದು, 1996-97ನೇ ಸಾಲಿನಲ್ಲಿ 5 ಮತ್ತು 6ನೇ ತರಗತಿಗಳಿರುತ್ತವೆ. ಪ್ರತಿ ತರಗತಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು 50ಕ್ಕೆ ಮಿತಿಗೊಳಿಸಲಾಗಿದೆ. ಈ ಶಾಲೆಗಳಿಗೆ ದಾಖಲಾಗುವ ವಿದ್ಯಾರ್ಥಿಗಳಿಗೆ ಊಟ, ವಸತಿ ಮತ್ತು ಪುಸ್ತಕ, ಸಮವಸ್ತ್ರಗಳಂತಹ ಶೈಕ್ಷಣಿಕ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರಲ್ಲಿ ದಾಖಲಾತಿಯನ್ನು ಶೇಕಡ 80ರಷ್ಟು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹಾಗೂ ಶೇಕಡ 20 ರಷ್ಟು ನಗರ ಪ್ರದೇಶದ ಮಕ್ಕಳಿಗೆ ಮೀಸಲಿಡಲಾಗಿದೆ. ಒಟ್ಟಾರೆ, ಶೇಕಡ 50 ರಷ್ಟು ದಾಖಲಾತಿಯನ್ನು ಹೆಣ್ಣು ಮಕ್ಕಳಿಗೆ ಹಾಗೂ ಶೇಕಡ 50 ರಷ್ಟನ್ನು ಗಂಡು ಮಕ್ಕಳಿಗೆ ಹಾಗೂ 25 ರಷ್ಟು ದಾಖಲಾತಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. 1995-96ನೇ ಸಾಲಿನಲ್ಲಿ ಪ್ರಾರಂಭಿಕವಾಗಿ ಆಯಾ ಜಿಲ್ಲೆಯ ವಿದ್ಯಾಪೀಠಗಳ ಕಟ್ಟಡಗಳು ಹಾಗೂ ಸ್ಥಳಾವಕಾಶ ಲಭ್ಯವಿರುವ ಸರ್ಕಾರಿ ಶಾಲೆಗಳ ಕಟ್ಟಡಗಳಲ್ಲಿ ಪ್ರಾರಂಭಿಸಲಾಗಿದೆ. 1995-96ರಲ್ಲಿ ರೂ. 181.00 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, 1996-97ನೇ ಸಾಲಿನಲ್ಲಿ ರೂ. 300.00 ಲಕ್ಷಗಳ ಆಯವ್ಯಯ ಒದಗಿಸಿಕೊಂಡು ಪ್ರತಿ ಶಾಲೆಗೆ ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಗ್ರಾಮೀಣ ಪ್ರದೇಶಗಳ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳ ಮಕ್ಕಳು ಶೈಕ್ಷಣಿಕ ಅವಶ್ಯಕತೆಗಳಿಗೆ ಅವರ ಪೋಷಕರಿಗೆ ಹೊರೆಯಾಗದಂತೆ, ಅವರಿಗೆ ಉತ್ತಮ ಶಿಕ್ಷಣ ನೀಡುವುದೇ ಈ ಕಾರ್ಯಕ್ರಮದ ಉದ್ದೇಶ.

ಶಿಕ್ಷಣ ಇಲಾಖೆಯು ಒಂದು ಬೃಹತ್ ಇಲಾಖೆ. ಇಲ್ಲಿನ ಬೇಡಿಕೆಗಳು ಅಪಾರ. ಆದರೆ ಲಭ್ಯವಾಗುವ ಆಯವ್ಯಯದಲ್ಲಿ ಎಲ್ಲಾ ಬೇಡಿಕೆಗಳನ್ನು ಒಂದೇ ಬಾರಿ ಈಡೇರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಹಂತ ಹಂತವಾಗಿ ಆದ್ಯತೆಯ ಮೇರೆಗೆ ಈಡೇರಿಸಲು ಪ್ರಯತ್ನಿಸಲಾಗುತ್ತಿದೆ.

ಶ್ಯಾಮನೂರು ಶಿವಶಂಕರಪ್ಪನವರ ಶ್ರೀ ಸುರೇಶ್‌ಕುಮಾರ್‌ರವರು, ಶ್ರೀ ಪುಟ್ಟಯ್ಯಗೌಡರು ಹಾಗೂ ಕೃಷ್ಣಪ್ಪನವರು, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಟಿ.ಸಿ.ಎಚ್. ಹಾಗೂ ಬಿಎಡ್ ಮಾಡಿ ಕೆಲಸಕ್ಕೆ ಸೇರುವಾಗ ಈಗಿರುವ ಕೃಪಾಂಕ ಶೇ. 5 ಕ್ಕಿಂತ ಹೆಚ್ಚು ಮಾಡಬೇಕೆಂದು ಸಲಹೆ ಮಾಡಿರುತ್ತಾರೆ. ಈ ಬಗ್ಗೆ ಸರ್ಕಾರ ಪರಿಶೀಲಿಸುವುದು.

ಶ್ರೀಯುತ ಮಂಜುನಾಥ ಕುನ್ನೂರುರವರು, ಶ್ರೀ ಜಯವಂತ್, ಶ್ರೀ ಬಸವನಗೌಡ ಪಾಟೀಲ್, ಶ್ರೀ ರಾಮದಾಸ್‌ರವರು ಹಾಗೂ ಶ್ರೀ ಮುನಿಯಪ್ಪನವರು ಶಿಕ್ಷಣ ಇಲಾಖೆಯ ಅನೇಕ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಈ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಪ್ರಯತ್ನಿಸುವುದು ಎಂದು

ಭರವಸೆ ನೀಡುತ್ತಾ ಶಿಕ್ಷಣ ಇಲಾಖೆಯ ಬೇಡಿಕೆಗಳಿಗೆ ಸದನ ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಕೋರುತ್ತೇನೆ.

ವಂದನೆಗಳು.

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಒಂದು ಪ್ರಾಮಾಣಿಕ ಪ್ರಯತ್ನಕ್ಕೆ ನಿಜವಾದ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಇದರ ಜೊತೆಗೆ ನಾನು ಕೆಲವು ಬೇಡಿಕೆಗಳನ್ನು ಮುಂದಿಟ್ಟಿದ್ದೆ. ಮೊದಲನೆಯದಾಗಿ, ಎಸ್.ಎಸ್.-ಎಲ್.ಸಿ. ಮತ್ತು ಪಿ.ಯು.ಸಿ. ಮರು ಮೌಲ್ಯಮಾಪನಕ್ಕೆ ಈಗಿನ ಕಾಯಿದೆ ಏನಿದೆ ಅದರಲ್ಲಿ ಅವಕಾಶವಿಲ್ಲ. ಆದರೆ ಕೆಲವು ನಿಯಮಾವಳಿಗಳನ್ನು ಹೊಂದಿಕೊಂಡಂತೆ ಈ ಮರು ಮೌಲ್ಯಮಾಪನದ ವ್ಯವಸ್ಥೆಯನ್ನು ತಾವು ಮಾಡಬೇಕು. ಇದಕ್ಕೆ ಕಾನೂನು ತಿದ್ದುಪಡಿ ಮಾಡಬೇಕೆನ್ನುವ ಮಾತನ್ನು ನಾನು ಹೇಳಿದ್ದೆ. ಇದನ್ನು ತಾವು ದಯವಿಟ್ಟು ಮುಂದಿನ ಅಧಿವೇಶನದಲ್ಲಾದರೂ ಮಾಡಬೇಕು. ನಾನು ಈಗಾಗಲೇ ಖಾಸಗಿ ಬಿಲ್ಲನ್ನು ತರುವ ಬಗ್ಗೆ ಮಾನ್ಯ ಸಭಾಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇನೆ. ಅದನ್ನು ತಾವು ಗಮನದಲ್ಲಿಟ್ಟುಕೊಂಡು ಸಹಾಯ ಮಾಡಬೇಕು. ಎರಡನೆಯದಾಗಿ, ಮಹಿಳಾ ಶಿಕ್ಷಕರನ್ನು ಅಪಾಯಿಂಟ್‌ಮೆಂಟ್ ಮಾಡುವಾಗ 30 ಪರ್ಸೆಂಟ್ ಮಾಡುತ್ತೇವೆಂದು ಹೇಳಿದ್ದೀರಿ. ಮುಖ್ಯವಾಗಿ ನೀವು ಮಹಿಳಾ ಶಿಕ್ಷಕರನ್ನು ನೇಮಕಾತಿ ಮಾಡಿ ನೀವು ಅವರನ್ನು ಪೋಸ್ಟಿಂಗ್ ಮಾಡುವಾಗ ಗ್ರಾಮಾಂತರ ಪ್ರದೇಶಗಳ ತೀರಾ ಕೊನೆಯ ಹಳ್ಳಿಯಲ್ಲಿ ಒಬ್ಬಂಟಿ ಇರುವ ಶಾಲೆಗಳಿಗೆ ದಯವಿಟ್ಟು ಮಹಿಳಾ ಶಿಕ್ಷಕರನ್ನು ನೇಮಕಾತಿ ಮಾಡಬೇಡಿ. ದಯವಿಟ್ಟು ನೇಮಕಾತಿಯ ಸಮಯದಲ್ಲಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿ. ಪುರುಷ ಶಿಕ್ಷಕರು ಯಾರಿದ್ದಾರೆ ಅವರಿಗೆ ಅಂತಹ ರಿಮೋಟ್ ಕಾರ್ನರ್‌ನಲ್ಲಿ ಕಳುಹಿಸಬಹುದು ಎಂದು ನಾನು ಹೇಳಬಯಸುತ್ತೇನೆ. ಇನ್ನು ಶಿಕ್ಷಕರು ಅತ್ಯಂತ ಪ್ರಾಮಾಣಿಕತನದ ಹುದ್ದೆಯಲ್ಲಿರುವವರು. ಅವರು ಪಾಪ ನಿವೃತ್ತಿಯಾದ ಮೇಲೆ ಅವರ ನಿವೃತ್ತಿ ವೇತನ ಕೊಡುವಾಗ ಆಗತಕ್ಕಂತಹ ವಿಳಂಬ ನೀತಿ ಏನಿದೆ ಅದನ್ನು ತಾವು ದಯವಿಟ್ಟು ನಿಮ್ಮ ಕಾಲದಲ್ಲಿ ನಿಲ್ಲಿಸಿ. ಶಿಕ್ಷಕರು ಪ್ರಾಮಾಣಿಕವಾಗಿ ಅವರು ಶಿಕ್ಷಕತನವನ್ನು ಮುಂದುವರಿಸಿಕೊಂಡು ಕೊನೆಯ ಗಳಿಗೆಯಲ್ಲಿ ಅವರು ನಿವೃತ್ತಿಯಾಗುವಂತಹ ಸಂದರ್ಭದಲ್ಲಿ ಆ ನಿವೃತ್ತಿವೇತನ ಪಡೆಯಲಿಕ್ಕೆ ಅನೇಕ ಮಂದಿ ಶಿಕ್ಷಕರುಗಳು ತೊಂದರೆ ಪಡುತ್ತಿದ್ದಾರೆ. ನಿವೃತ್ತಿ ವೇತನ ಕೊಡುವಾಗ ಶಿಕ್ಷಕರಿಗೆ ಆದಷ್ಟು ಬೇಗ ನಿವೃತ್ತಿವೇತನ ದೊರೆಯುವಂತೆ ಮಾಡಬೇಕು. ಈಗಾಗಲೇ ರಾಷ್ಟ್ರದ ಕ್ರೀಡಾರಂಗದಲ್ಲಿ ಅತ್ಯಂತ ಕಳಪೆಮಟ್ಟದ ಪ್ರದರ್ಶನಗಳನ್ನು ನಾವು ಮಾಡುತ್ತಿದ್ದೇವೆ. ಇದು ನಾವು ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಒಂದು ಕ್ರೀಡಾ ಚಟುವಟಿಕೆಗೆ ಮೂಲಭೂತವಾದಂತಹ ಒಂದು ರಚನಾತ್ಮಕವಾದಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ನನ್ನ ವಿನಂತಿ. ಏಕೆಂದರೆ ಸಣ್ಣ ಮಕ್ಕಳಲ್ಲಿ ಕ್ರೀಡಾ ಚಟುವಟಿಕೆಯನ್ನು ಶಿಸ್ತುಬದ್ಧವಾಗಿ ನಾವು ಮಾಡಿಕೊಂಡು ಹೋದರೆ,. ಮುಂದಿನ ದಿನದಲ್ಲಿ ಅವರು ಒಳ್ಳೆಯ ರೀತಿಯ ಕ್ರೀಡಾ ಚಟುವಟಿಕೆ-

ಯನ್ನು ಪ್ರದರ್ಶನ ಮಾಡಬಹುದು. ಈಗ ಶಾಲಾ ಕೊಠಡಿಗಳಿಗೆ ಕೊಡತಕ್ಕ ಹಣ ಬಹಳ ಕಡಿಮೆ ಯಿದೆ. ತಾವು ಇದರ ಬಗ್ಗೆ ದಯವಿಟ್ಟು ಮರುಪರಿಶೀಲನೆ ಮಾಡಿ. ಸನ್ಮಾನ್ಯ ಉಪ ಮುಖ್ಯಮಂತ್ರಿ-ಗಳು ಈಗ ಅರ್ಥಸಚಿವರು ಇದ್ದಾರೆ. ಅವರ ಜೊತೆ ಸೇರಿಕೊಂಡು ಶಾಲಾ ಕೊಠಡಿಗಳನ್ನು ಕಟ್ಟಲಿಕ್ಕೆ ಕೊಡತಕ್ಕ ಹಣದ ಬಗ್ಗೆ ಮರುಪರಿಶೀಲನೆ ಮಾಡಿ ಇನ್ನಷ್ಟು ಹೆಚ್ಚಿಗೆ ಹಣವನ್ನು ಒದಗಿಸಿ ಕೊಡುವು-ದರೊಂದಿಗೆ, ಶಿಕ್ಷಕೇತರ ಸಿಬ್ಬಂದಿ ನೇಮಕಾತಿ ಬಗ್ಗೆ ನಾನು ಹೇಳಿದ್ದೇನೆ. ತಾವು ಅದರ ಬಗ್ಗೆ ಪ್ರಸ್ತಾಪವೇ ಮಾಡಲಿಲ್ಲ. ಎಷ್ಟೋ ಶಾಲೆಗಳಲ್ಲಿ ಸಣ್ಣ ಸಣ್ಣ ಮಕ್ಕಳು ಶಾಲೆ ಗುಡಿಸುವಂತಹ ಕೆಲಸ ಮಾಡುತ್ತಿದ್ದಾರೆ. ಕೊನೆಯ ಪಕ್ಷ ಒಂದು ಶಾಲೆಗೆ ಒಬ್ಬ ಶಿಕ್ಷಕೇತರ ಸಿಬ್ಬಂದಿಯಾದರೂ ಇರುವ ಹಾಗೆ ತಾವು ನೇಮಕಾತಿಯಲ್ಲಿ ವ್ಯವಸ್ಥೆ ಮಾಡಬೇಕೆನ್ನುವ ಬೇಡಿಕೆಯನ್ನು ತಮ್ಮ ಮುಂದಿಡಬಯಸುತ್ತೇನೆ.

ಡಾ: ಎಂ.ಸಿ. ಕರ್ಕಿ:- ಮಾನ್ಯ ಅಧ್ಯಕ್ಷರೆ, ಆಪರೇಷನ್ ಬ್ಲಾಕ್‌ಬೋರ್ಡ್ ಎನ್ನತಕ್ಕ ಯೋಜನೆ-ಯಲ್ಲಿ ಅನೇಕ ಶಿಕ್ಷಕರು ನೇಮಕಗೊಂಡಿದ್ದಾರೆ. ಈ ಆಪರೇಷನ್ ಬ್ಲಾಕ್‌ಬೋರ್ಡ್ ಶಿಕ್ಷಕರಿಗೆ ಆರು ತಿಂಗಳಿಗೂ ವೇತನ ಸಿಗುತ್ತಿಲ್ಲ. ಕೆಲವೊಮ್ಮೆ ವರ್ಷಕ್ಕೊಮ್ಮೆ ಸಿಗುತ್ತಿಲ್ಲ. ಇದನ್ನು ತಪ್ಪಿಸಬೇಕಾಗಿದೆ. ಅವರೂ ಕೂಡ ಶಿಕ್ಷಕರು, ಇದು ಸೆಂಟ್ರಲ್ ಗೌರ್ನಮೆಂಟ್‌ನಿಂದ ಬಂದಿರತಕ್ಕ ಯೋಜನೆಯಾಗಿ-ರಬಹುದು. ಆದರೆ ರಾಜ್ಯಸರ್ಕಾರದ ವೇತನವನ್ನು ಕೊಟ್ಟು ಅನಂತರ ರೀಇಂಬರ್ಸ್‌ಮೆಂಟ್ ಮಾಡಿಕೊಳ್ಳತಕ್ಕ ಕಾರ್ಯಕ್ರಮ, ಇದು ಆಗಬೇಕು. 6 ತಿಂಗಳಿಗೊಂದು ಸಾರಿ 3 ತಿಂಗಳಿಗೊಂದು ಸಾರಿ ವರ್ಷಕ್ಕೊಂದು ಸಾರಿ ವೇತನ ಕೊಡುವುದು ನಮ್ಮ ಸರ್ಕಾರಕ್ಕೆ ಭೂಷಣ ಆಲ್ಲವೆಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನೊಂದು ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮರು ಮೌಲ್ಯಮಾಪನ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಅವಕಾಶ ಮಾಡಿಕೊಡತಕ್ಕದ್ದು ಸರ್ಕಾರದ ಕೈ-ಯಲ್ಲಿದೆ. ತಾವು ಕಾನೂನು ತಿದ್ದುಪಡಿ ಮಾಡಬಹುದು. ಅದನ್ನು ಮಾಡಿಕೊಳ್ಳತಕ್ಕ ಅಧಿಕಾರ ತಮ್ಮ-ಲ್ಲಿದೆ. ಅದು ಇರಲೇಬಾರದು ಎನ್ನತಕ್ಕ ಅರ್ಥವೇನು ಆಗುವುದಿಲ್ಲ. ಹಾಗೆಯೇ ಮರು ಎಣಿಕೆಯಲ್ಲಿ 5 ಅಂಕಕ್ಕಿಂತ ಹೆಚ್ಚು ವ್ಯತ್ಯಾಸ ಕಂಡುಬಂದ ಪ್ರಕರಣದಲ್ಲಿ ಮೌಲ್ಯಮಾಪಕರ ವಿರುದ್ಧ ಕ್ರಮ ತೆಗೆದು-ಕೊಳ್ಳಲು ತೀರ್ಮಾನಿಸಿದ್ದೇವೆ ಎಂದು ಹೇಳಿದ್ದೀರಿ. ಲೆಕ್ಕದಲ್ಲಿ ಟೋಟಲ್ ಮಾಡುವಾಗ ಏನೂ ವ್ಯತ್ಯಾಸವಾಗುವುದಿಲ್ಲ. ಮೌಲ್ಯಮಾಪನದಲ್ಲಿಯೇ ಮಿಸ್‌ಟೇಕ್ ಆಗುತ್ತದೆ. ಸರಿಯಾದ ಉತ್ತರವನ್ನು ಬರೆದರೂ ಸಹ ಕಾಟ್ ಹೊಡೆದು ಜೀರೋ ಕೊಡುತ್ತಾರೆ. ನಾನೇ ಪೇಪರ್ ನೋಡಿದ್ದೇನೆ. ಉತ್ತರ ಸರಿಯಾಗಿ ಬರೆದಂತಹ ಪತ್ರಿಕೆಗೆ ಪೂಜಿ ಕೊಟ್ಟು ಕಾಟ್ ಹೊಡೆದು ಪೂಜಿ ಬರೆಯುತ್ತಾರೆ. ಅಂದರೆ ಸೊನ್ನೆ ಕೊಡುತ್ತಾರೆ. ಇದನ್ನು ರ್‍ಯಾಂಡಮ್ ಚೆಕ್ಕನ್ನಾದರೂ ಮಾಡಲಿಕ್ಕೆ ಸಾಧ್ಯವಿದೆಯೋ ರ್‍ಯಾಂಡಮ್ ಚೆಕ್ 10 ಪೇಪರ್‌ನಲ್ಲಿ ಒಂದು ಪೇಪರ್, ನೂರು ಪೇಪರ್‌ನಲ್ಲಿ ಎರಡು ಪೇಪರ್. ಆ ರೀತಿ ರ್‍ಯಾಂಡಮ್ ಚೆಕ್ ಮಾಡಿ ಯಾರು ಆ ರೀತಿ ಕೊಟ್ಟಿದ್ದಾರೆ ಅವರಿಗೆ ಶಿಕ್ಷೆ ಕೊಡಿ. ಅದು ನಿಮಗೆ ಸಾಧ್ಯವಿದೆಯಾ? ಮತ್ತೊಂದು ನಾನು ಸೂಚನೆ ಕೊಟ್ಟ ಹಾಗೆ ಶಿಕ್ಷಕರು ನಿರ್ದಿಷ್ಟವಾದ ಸಮಯ ಪೂರ ಅಲ್ಲಿರದೆ ಕೇವಲ ಒಂದು ಗಂಟೆ ಅರ್ಧಗಂಟೆಯಲ್ಲಿ ಮುಗಿಸಿ ಎದ್ದುಹೋಗುತ್ತಾರೆ. ಅವರನ್ನು

ಆಲ್ಲಿ ಕಡ್ಡಾಯವಾಗಿ ಕೂರಿಸುವಂತಹ ಕೆಲಸವಾಗುತ್ತದೆಯೆ? ಆದನ್ನು ತಾವು ದಯವಿಟ್ಟು ಹೇಳ-ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಎರಡು ವಿಷಯಗಳ ಬಗ್ಗೆ ನಾನು ಕ್ಲಾರಿಫಿ-ಕೇಶನ್ ಕೇಳುತ್ತೇನೆ. ನಕಲಿ ಮಾರ್ಕ್ಸ್‌ಕಾರ್ಡ್ ಬಗ್ಗೆ ಮಾತನಾಡುವಾಗ ನಾನು ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಸಿ.ಐ.ಡಿ ತನಿಖೆಗೆ ಬರೆದಿದ್ದೇನೆಂದು ಮಂತ್ರಿಗಳು ಹೇಳಿದರು. ಆದರೆ ನನಗೆ ಗೊತ್ತಿರತಕ್ಕ ಮಾಹಿತಿಯ ಪ್ರಕಾರ, ಮಾನ್ಯ ಗೋವಿಂದೇಗೌಡರು ಪ್ರಾಮಾಣಿಕ ಪ್ರಯತ್ನ ಮಾಡಿ ಸಿ.ಐ.ಡಿ ತನಿಖೆ-ಯಾಗಬೇಕೆಂದು ಬರೆದಿದ್ದಾರೆ. ಆದರೆ ಇದುವರೆಗೂ ಸರ್ಕಾರ ಸಿ.ಐ.ಡಿ ತನಿಖೆಯಾಗಬೇಕು ಎಂದು ಆಜ್ಞೆ ಹೊರಡಿಸಿಲ್ಲ. ಇವರು ಬರೆದು ಸುಮಾರು ಒಂದೂವರೆ ವರ್ಷದ ಮೇಲಾಗಿದೆ. ಇದರ ಬಗ್ಗೆ ಇವತ್ತಾದರೂ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರಾ? ಇಲ್ಲವಾ ಏಕೆಂದರೆ ಆದೊಂದು ದೊಡ್ಡ ರ್‍ಯಾಕೆಟ್ ಇದೆ. ನಾನು ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡ-ಬೇಕು. ಸಿಲಬಸ್ ಬಗ್ಗೆ ಅವರು ಹೇಳಿದ್ದಾರೆ. ನಮ್ಮ ರಾಜ್ಯದ ವಿದ್ಯಾರ್ಥಿಗಳು ವಿಶ್ವದ ಎಲ್ಲ ಅಭಿವೃದ್ಧಿ-ಶೀಲ ರಾಷ್ಟ್ರಗಳ ಮಕ್ಕಳ ಜೊತೆಯಲ್ಲಿ ಸ್ಪರ್ಧಿಸಲು ತಯಾರಾಗಬೇಕೆಂದು ಹೇಳಿದ್ದಾರೆ, ಅದರ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿಲ್ಲ. ನಾನು ಹೇಳಿದಂತಹ ಮಾತು ಏನೆಂದರೆ, ನೀವು ಪ್ರಾಥಮಿಕ ಶಾಲೆಯ ಮೊದಲನೆಯ ಪಾಠದಲ್ಲಿ ಇಟ್ಟಿರತಕ್ಕ ಮೊದಲನೆಯ ಪಾಠ ಮಕ್ಕಳಲ್ಲಿ ಭೌದ್ಧಿಕ ಆಸಕ್ತಿ-ಯನ್ನು ಹುಟ್ಟಿಸುವುದಲ್ಲಿ ವಿಫಲವಾಗುತ್ತೆ. ಝಣ ಝಣ ಝಣ ಠಣ ಠಣ ಅಂತ ಹೇಳಿ ಪ್ರಾರಂಭ-ವಾಗತಕ್ಕ ಪಾಠ ಭೌತಿಕ ಆಸಕ್ತಿಯನ್ನು ಹೇಗೆ ಹುಟ್ಟಿಸುತ್ತೆ. ಭೌದ್ಧಿಕ ಆಸಕ್ತಿಯನ್ನು ಹುಟ್ಟಿಸುವುದಿಲ್ಲ. ಇವತ್ತು ನಮ್ಮ ಸಮಾಜದ ಪ್ರಶ್ನೆ ಇರತಕ್ಕದ್ದು ಭೌದ್ಧಿಕ ದಾರಿದ್ರ್ಯದಿಂದ ಇವತ್ತು ನರಳುತ್ತಿದ್ದೇವೆ. ಆ ಭೌದ್ಧಿಕ ಆಸಕ್ತಿಯನ್ನು ಹೆಚ್ಚಿಸತಕ್ಕ ರೀತಿಯಲ್ಲಿ ಸಿಲಬಸ್ ಆಗತಕ್ಕ ಕೆಲಸ ಆಗಬೇಕೆಂದು ಹೇಳಿದ್ದೇನೆಯೇ ಹೊರತು ನಾವು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ಮಾಡಬೇಕು ಅದಕ್ಕೆ ಬೇಕಾಗಿರತಕ್ಕ ಸಿಲಬಸ್ ಬೇಕಾಗಿಲ್ಲವೆಂದು ನಾನು ಹೇಳಿಲ್ಲ. ಆ ಸಿಲಬಸ್‌ನ್ನು ಮಾರ್ಪಾಟು ಮಾಡ-ಬೇಕೆಂಬುದರ ಅರ್ಥ ಏನೆಂದರೆ, ಮಕ್ಕಳಲ್ಲಿ ಪ್ರಾರಂಭದಿಂದಲೂ ಕೂಡ ಭೌದ್ಧಿಕ ಆಸಕ್ತಿಯನ್ನು ಬೆಳೆಸಬೇಕಾಗಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ನಾನು ಎರಡು ಸಾರಿಯಿಂದ ಗಮನಕ್ಕೆ ತಂದಿದ್ದೇನೆ. ಶಾಲಾ ಕಟ್ಟಡ ಕಟ್ಟುವುದು ಇದೆಯಲ್ಲ, ಈ ಆಶ್ರಯ ಮನೆ ಕಟ್ಟಡ ಕಟ್ಟಿದ ಹಾಗೆ ಕಟ್ಟುವುದು ಬೇಡ. ಶಾಲಾಕಟ್ಟಡ ಆರ್.ಸಿ.ಸಿ. ಆಗಲೇಬೇಕು. ಆರ್.ಸಿ.ಸಿ. ಕಟ್ಟಡ ಕಟ್ಟದಿದ್ದರೆ ಹಳ್ಳಿಯಲ್ಲಿ ಎಲ್ಲೂ ಜಾಗವಿಲ್ಲ. ಯಾವ ಮಕ್ಕಳಿಗೂ ಆಟದ ಮೈದಾನವಿಲ್ಲ. ಇನ್ನು ಮೇಲೆ ಯಾವುದೇ ಹಳ್ಳಿಗಳಲ್ಲಿ ಯಾವುದೇ ಕಾರಣಕ್ಕೂ ಶಾಲೆಗೆ ಸಂಬಂಧಪಟ್ಟ ಜಾಗ ಸಿಗುವುದಿಲ್ಲ. ಅದಕ್ಕೆ ದಯವಿಟ್ಟು ತಾವು ಗಂಭೀರವಾಗಿ ಯೋಚನೆ ಮಾಡಿ. ನಮ್ಮ ಜಿಲ್ಲೆಗೆ 500 ಕೊಠಡಿ ಕೊಟ್ಟಿದ್ದೀರಿ. 300 ಕೊಠಡಿಯನ್ನೆ ಕೊಡಿ ಸಾಕು. ಆರ್.ಸಿ.ಸಿ. ಕಟ್ಟಡ ಕಟ್ಟಿದರೆ ಕನಿಷ್ಟ ಎರಡು ಅಂತಸ್ತು ಕಟ್ಟಿ-

ಕೊಂಡರೆ ಸುಮಾರು ನೂರು ವರ್ಷ ಭೂಮಿಯನ್ನು ಉಳಿಸಿಕೊಳ್ಳಬಹುದು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಎರಡನೆಯದು ಬಹಳ ಮುಖ್ಯವಾಗಿ ಭೋಧನಾ ಕ್ರಮದ ಬಗ್ಗೆ ಉಪಾಧ್ಯಾಯರುಗಳಿಗೆ ಕನಿಷ್ಟ ಒಂದು ವರ್ಷ ಅಥವಾ ಎರಡು ವರ್ಷದಲ್ಲಿ ಒಂದು ತಿಂಗಳಾದರೂ ಟ್ರೈನಿಂಗ್ ಕೊಡಿಸಿ. ಹೊಸ ಹೊಸ ಬೋಧನಾ ಕ್ರಮಗಳನ್ನು ಆಚರಣೆಗೆ ತರಬೇಕು. ನಾನು ಬಹಳ ಶಾಲೆಗಳಿಗೆ ಹೋಗಿ ಭೇಟಿ ಮಾಡಿದ್ದೇನೆ, ಅವರ ಭೋಧನಾ ಕ್ರಮ ಹೇಗಿರುತ್ತದೆಂದರೆ ನಾಲ್ಕು ಗಂಟೆಯ ಬಸ್ಸಿಗೆ ಬೇಗ ಹೋಗಬೇಕು, ಎಷ್ಟು ಬೇಗ ಆ ಮಕ್ಕಳನ್ನು ಓಡಿಸಬೇಕೆಂಬ ಭಾವನೆ ಇರುತ್ತದೆಯೇ ಹೊರತು ನಿಜವಾಗಿ ಒಬ್ಬ ಉಪಾಧ್ಯಾಯ ವೃತ್ತಿ ಮಾಡುವವನಿಗೆ ತನ್ನ ಜವಾಬ್ದಾರಿ ಏನು ಎನ್ನುವುದು ಯಾರಿಗೂ ಇಲ್ಲ. ಏಕೆಂದರೆ ಇದು ನನ್ನ ವೈಯಕ್ತಿಕ ಅಭಿಪ್ರಾಯದಿಂದ ಹೇಳುತ್ತೇನೆ, ಉಪಾಧ್ಯಾಯ ವೃತ್ತಿಗೆ ದ್ರೋಹ ಮಾಡುವವನು ಈ ದೇಶದ ಮೊಟ್ಟಮೊದಲನೆಯ ದೇಶದ್ರೋಹಿಯೆಂದು ನಾನು ಹೇಳುತ್ತೇನೆ. ಬೋಧನಾ ಕ್ರಮದ ಬಗ್ಗೆ ಉಪಾಧ್ಯಾಯರುಗಳಿಗೆ ಯಾವರೀತಿಯ ತಿಳುವಳಿಕೆ ಕೊಡಬೇಕೋ ಅದನ್ನು ತಾವು ಯೋಚನೆ ಮಾಡಬೇಕು. ಟಿ.ಸಿ.ಹೆಚ್., ಬಿ.ಎಡ್.ನವರಿಗೆ ಮಕ್ಕಳಿಗೆ ಕ್ರೀಡಾ ಚಟುವಟಿಕೆಯ ಬಗ್ಗೆ ತಿಳುವಳಿಕೆಯನ್ನು ಕೊಡಬೇಕು. ಬಿ.ಎಡ್.ನವರಿಗೆ ಉದ್ಯೋಗದ ಬಗ್ಗೆ ಆಲೋಚನೆ ಮಾಡತಕ್ಕ ಚಟುವಟಿಕೆಗಳನ್ನು ತರಬೇತಿ ಕೊಡುವ ಮೂಲಕ ಅವರಿಗೆ ಹೆಚ್ಚು ವಿಚಾರ ತಿಳಿಸಿ ಅವರು ಮಕ್ಕಳಿಗೆ ಪಾಠ ಹೇಳುವ ತರಬೇತಿಯನ್ನು ಕೊಡಬೇಕು. ಭೂಮಿ ಕ್ಷೇತ್ರದ ಬಗ್ಗೆ ಉಳುಮೆ ಮಾಡುವುದನ್ನು ಕಲಿಸಿ ಕೊಡುವುದಿಲ್ಲವೆಂದು ಹೇಳುತ್ತಾರೆ. ಏಕೆಂದರೆ ಉಳುಮೆ ಮಾಡುವುದನ್ನು ಕಲಿಯದೆ ಐ.ಎ.ಎಸ್. ಆಫೀಸರ್‌ನಿಂದ ಹಿಡಿದು ಎಲ್ಲರಿಗೂ ಉಳುಮೆ ಮಾಡುವುದನ್ನು ಕಲಿಸಬೇಕು, ಐ.ವಿ.ಎ.ಎಸ್. ಆಗಬೇಕು. ಇಂಡಿಯನ್ ವಿಲೇಜ್ ಅಡ್ಮಿನಿಸ್ಟ್ರೇಟಿವ್ ಸರ್ವೀಸ್ ಆಗಬೇಕು. ಐ.ಎ.ಎಸ್. ಆಗಬಾರದು, ಐ.ವಿ.ಎ.ಎಸ್. ಆಗಬೇಕು ಆಗ ಏನಾದರೂ ಉಪಯೋಗವಾಗಬಹುದು.

8.10 ಪಿ.ಎಂ.

ಶ್ರೀ ಎಸ್. ಸುರೇಶ್‌ಕುಮಾರ್:- ನಾನು ಒಂದೇ ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ನಾನು ಮಾತನಾಡುವಾಗ ಹೇಳಿದ್ದೆ. ಶಿಕ್ಷಣ ಇಲಾಖೆಯಿಂದ ಬೆಂಗಳೂರು ಮಹಾ ನಗರಪಾಲಿಕೆಗೆ ಒಬ್ಬ ಶಿಕ್ಷಣ ಅಧಿಕಾರಿಯನ್ನು ನೇಮಿಸಬೇಕು. ಕಳೆದ ಒಂದು ವರ್ಷದಿಂದ ಇಲ್ಲಿಯ ಶಿಕ್ಷಣ ಇಲಾಖೆಯಲ್ಲಿ ಸೂಕ್ತ ವ್ಯಕ್ತಿ ಇಲ್ಲದೇ ಇರುವುದರಿಂದ ನಗರಪಾಲಿಕೆಯಲ್ಲಿ ಶಿಕ್ಷಣ ವ್ಯವಸ್ಥೆ ಯಾವ ರೀತಿ ಕುಸಿಯುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಹಿಂದೆ ಯಾರನ್ನೋ ಕಳಿಸಿದ್ದಕ್ಕೆ ಅಲ್ಲೆಲ್ಲ ಚಳುವಳಿ, ಸ್ಟ್ರೈಕ್ ಎಲ್ಲಾ ಆಯಿತು. ಕೂಡಲೇ ತಮ್ಮ ಇಲಾಖೆಯಿಂದ ಅಲ್ಲಿಗೆ ಒಬ್ಬ ಸೂಕ್ತ ವ್ಯಕ್ತಿಯನ್ನು ಕಳಿಸಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಸಿಲ್‌ಬಸ್ ಫೈನಲೈಸ್ ಮಾಡುವಂಥಾದ್ದನ್ನು ಕನಿಷ್ಟ . . .

ಅಧ್ಯಕ್ಷರು:- ಎಲ್ಲರೂ ಕೈಯೆತ್ತಿದರೆ ಹೇಗೆ? ಬೇರೆ ಬೇಡಿಕೆಗಳು ಇವೆ.

ಶ್ರೀ ಎನ್. ಯೋಗೀಶ್ ಭಟ್:- ಫೆಬ್ರವರಿ–ಮಾರ್ಚ್‌ನಲ್ಲಿ ಮುದ್ರಣವನ್ನು ಮುಕ್ತಾಯ ಮಾಡಿ, ಜೂನ್ ತಿಂಗಳ ಒಳಗೆ ಸಿಗುವಹಾಗೆ ಮಾಡಬೇಕು. ಈ ಸರ್ತಿ ಜುಲೈ–ಆಗಸ್ಟ್ ಆದರೂ ಕೂಡ ಮಕ್ಕಳಿಗೆ ಪುಸ್ತಕಗಳು ಸಿಗದೇ ಇರುವುದರಿಂದ ಸಾಕಷ್ಟು ತೊಂದರೆಯಾಗಿರುವುದನ್ನು ಸರ್ಕಾರದ ಗಮನಕ್ಕೆ ತರುತ್ತ ಖಂಡಿತವಾಗಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಶೇಷವಾದ ಆಸಕ್ತಿಯನ್ನು ವಹಿಸಬೇಕು. ಕನಿಷ್ಟ ಜೂನ್ ತಿಂಗಳೊಳಗೆ ಮುದ್ರಿತ ಪುಸ್ತಕಗಳು ಬಿಡುಗಡೆಯಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಎರಡನೆಯದಾಗಿ, ಜಾಬ್ ಓರಿಯೆಂಟಡ್ ಕೋರ್ಸ್ ಏನಿದೆ ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಕನಿಷ್ಟ ಡಿಗ್ರಿಗಳನ್ನು ಆಯಾಯ ವೃತ್ತಿಗೆ ಕೊಡುವ ರೀತಿಯಲ್ಲಿ ಏಕೆಂದರೆ ಸಹಜವಾಗಿ ಎಲ್ಲ ಕಡೆಯಿಂದ ನಿರೀಕ್ಷಿಸುವಂಥಾದ್ದು ಡಿಗ್ರಿ ಆಗಬೇಕು ಅಂತ ಹೇಳಿ. ಆ ಜಾಬ್ ಓರಿಯೆಂಟೆಡ್ ಕೋರ್ಸ್‌ಗಳಿಗೆ ಪದವಿಯನ್ನು ಕೊಡುವಂಥ ವ್ಯವಸ್ಥೆ ಮಾಡಿದರೆ ಬಹಳ ಉಪಯುಕ್ತವಾಗಬಹುದು ಎಂಬ ಸಲಹೆಯನ್ನು ಕೊಡಬಯಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ನಾನು ಬೇಡಿಕೆಗಳ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಡಯಟ್‌ಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಇದರಲ್ಲಿ ಬಹಳ ತಪ್ಪು ಉತ್ತರವನ್ನು ಕೊಟ್ಟು ಬಿಟ್ಟಿದ್ದಾರೆ. ಈ ಹಾರ್ಡ್‌ವೇರ್ ಎಂದರೆ ಕಂಪ್ಯೂಟರ್ ಉಪಕರಣಗಳನ್ನು ಒದಗಿಸುವ ಬಗ್ಗೆ ಕೇಂದ್ರ ಸರ್ಕಾರ ವಿಳಂಬ ಮಾಡಿದೆಯೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದು, ರಾಜ್ಯ ಸರ್ಕಾರದಿಂದ ಈ ಸಂಸ್ಥೆಗಳಿಗೆ ಕೊಟ್ಟಿರತಕ್ಕಂಥ ಉಪಕರಣಗಳ ಬಗ್ಗೆ ನಾನು ಪ್ರಸ್ತಾಪ ಮಾಡಿ, ಅವರು ಉಪಯೋಗ ಮಾಡಿಲ್ಲವೆಂದು ಹೇಳಿದ್ದೆ. ಕೇಂದ್ರ ಸರ್ಕಾರದಿಂದ ಬಹಳ ವಿಳಂಬವಾಗಿರತಕ್ಕಂಥ ಮಾತನ್ನು ನಾನು ಹೇಳಲಿಲ್ಲ. ದಯವಿಟ್ಟು ಇದರ ಬಗ್ಗೆ ಹೆಚ್ಚು ಆಸಕ್ತಿವಹಿಸಿ, ಇದು ಸರಿಯಾಗಿ ಸದುಪಯೋಗ ಆಗದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಕ್ಷೆಯನ್ನೂ ಕೊಡಬೇಕು. ಆ ದೃಷ್ಟಿಯಿಂದ ಕೊಟ್ಟಿತಕ್ಕಂಥಾದ್ದು ಸದುಪಯೋಗವಾಗಬೇಕು ಎಂಬ ವಿಚಾರದಿಂದ ನಾನು ಹೇಳಿದ್ದೆ. ಅದೇ ರೀತಿಯಲ್ಲಿ ತಾವು ಶಾರೀರಿಕ ಶಿಕ್ಷಣಕ್ಕೂ ಹೆಚ್ಚಿನ ಮಹತ್ವವನ್ನು ಕೊಡಬೇಕಾದದ್ದು ಅವಶ್ಯಕತೆ ಇದೆ. ಆ ದೃಷ್ಟಿಯಿಂದ ತಾವು ಬಜೆಟ್‌ನಲ್ಲಿ ಕೊಟ್ಟಿರುವುದು ಬಹಳ ಕಡಿಮೆ ಇದೆ. ಬಹಳ ಕಡಿಮೆ ಹಣ ಕೊಟ್ಟಿದ್ದೀರಿ. ಇದರ ಜೊತೆಗೆ ಇನ್ನೊಂದು ವರ್ಗವನ್ನು ಹೆಚ್ಚಿಸುವುದಕ್ಕೆ ತಾವು ಅನುಕೂಲ ಮಾಡಿಕೊಟ್ಟಿದ್ದೀರಿ. ಆದೇರೀತಿಯಲ್ಲಿ ವರ್ಗ ಹೆಚ್ಚಿಸಿದ ರೀತಿಯಲ್ಲಿ ಶಿಕ್ಷಕರ ಹುದ್ದೆಯನ್ನು ಕೂಡ ಹೆಚ್ಚಿಸಲು ಮಂಜೂರಾತಿ ಕೊಡಬೇಕು. ಆಗ ಮಾತ್ರ ಅಸಮತೋಲನವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಸಿ.ಎಚ್. ವಿಜಯಶಂಕರ್:- ಸನ್ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಿರುವ ಸಮಯದಲ್ಲಿ ಎರಡು ಸಲಹೆಗಳನ್ನು ಮಾತ್ರ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸಚಿವರಿಗೆ ಕೊಡುವುದಕ್ಕೆ ಬಯಸುತ್ತೇನೆ. ಶಾಲೆಗಳು ಇರುವಂಥ ಜಾಗದಲ್ಲಿ ಶೌಚಾಲಯ ಇರುವಂಥಾದ್ದು ಕಡ್ಡಾಯ ಮಾಡಬೇಕು. ಕೊನೆಯ ಪಕ್ಷ ಪ್ರಾಥಮಿಕ ಶಾಲೆಗಳಿಗೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದರೆ

ಮಾಧ್ಯಮಿಕ ಶಾಲೆಗಳಿಗೆ ಕೊಡಬೇಕು. ಮಾಧ್ಯಮಿಕ ಶಾಲೆಗಳಿಗೆ ಕೊಡುವುದಕ್ಕೆ ಸರ್ಕಾರಕ್ಕೆ ಕಷ್ಟ ಇದೆಯೆಂದರೆ ಕೊನೆಯಪಕ್ಷ ಮಾಧ್ಯಮಿಕ ಹೆಣ್ಣುಮಕ್ಕಳ ಶಾಲೆಗಳು ಏನಿವೆ, ಅಲ್ಲಿ ಕಡ್ಡಾಯವಾಗಿ ಶೌಚಾಲಯವನ್ನು ನಿರ್ಮಿಸುವಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನನ್ನ ಒಂದನೇ ಮನವಿ. ಎರಡನೆಯದು, ಆಯಾಯ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವಂಥ ಶಿಕ್ಷಕರನ್ನು ಆ ಕ್ಷೇತ್ರದಿಂದ ಹೊರಗಡೆ ಇಟ್ಟರೆ ಹೆಚ್ಚಿನ ರೀತಿಯಲ್ಲಿ ಅವರಿಂದ ಸೇವೆ ತೆಗೆದುಕೊಳ್ಳಬಹುದು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಶಿಕ್ಷಕರನ್ನು ಅವರ ಕ್ಷೇತ್ರದಿಂದ ಹೊರಗಿಟ್ಟು ವರ್ಗಾವಣೆ ನೀತಿಯನ್ನು ಅನುಸರಿಸಿದರೆ ಹೆಚ್ಚಿನ ರೀತಿಯಲ್ಲಿ ಶಿಕ್ಷಣ ಇಲಾಖೆಗೆ ಸಹಾಯವಾಗುತ್ತದೆ ಎಂದು ತಿಳಿಸಲು ಬಯಸುತ್ತೇನೆ.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಶಿಕ್ಷಣ ಇಲಾಖೆಯ ಬೇಡಿಕೆ ಬಗ್ಗೆ ಮಾತನಾಡುವಾಗ ಮಹಾನಗರಪಾಲಿಕೆ ಶಾಲೆಗಳು, ಅಲ್ಲಿ ಓದುವಂಥ ಮಕ್ಕಳು, ಅಲ್ಲಿ ಇರತಕ್ಕಂಥ ಶಿಕ್ಷಕರು, ಶಿಕ್ಷಕ ಸಹೋದರಿಯವರು ಒಳ್ಳೆಯ ಸಂಸ್ಕೃತಿಯನ್ನು ಕಲಿಸುವಂಥ ಕೆಲಸ ಮಾಡುತ್ತಿದ್ದಾರೆ ಎಂದು ಮಾತನಾಡಿದ್ದೇನೆ. ಇದೇ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಂಥ ಉತ್ತರದಲ್ಲಿ ಕೂಡ ಒಳ್ಳೆಯ ಅಂಶಗಳನ್ನು ಅವರು ಹೇಳಿದ್ದಾರೆ. ನಾನು ಎರಡು–ಮೂರು ವಿವರಗಳನ್ನು ಮಾನ್ಯ ಮಂತ್ರಿಗಳಿಗೆ ಕೊಡಬೇಕಾಗಿದೆ. ಒಂದನೇಯದು, ಕೋಟ್ಯಾಂತರ ರೂಪಾಯಿ ಬೆಲೆಬಾಳುವಂಥ ಸುಂದರವಾದ ಸರ್ಕಾರಿ ಕಟ್ಟಡಗಳನ್ನು ಒಳಗೊಂಡ ಶಾಲೆಗಳು ಮಹಾನಗರದಲ್ಲಿವೆ. ಆ ಕಟ್ಟಡಗಳನ್ನು ರಕ್ಷಣೆ ಮಾಡಿಕೊಳ್ಳಲು ಸಾಧ್ಯವಿಲ್ಲದೆ ರಾತ್ರಿ ವೇಳೆಯಲ್ಲಿ ಮತ್ತು ಹಗಲಿನಲ್ಲಿ ಹಲವಾರು ರೀತಿಯ ತಪ್ಪು ಕಾರ್ಯಗಳು ನಡೆಯುವಂಥಾದ್ದನ್ನು ನಾವು ನೋಡುತ್ತಿದ್ದೇವೆ. ಕಡ್ಡಾಯವಾಗಿ ಸರ್ಕಾರಕ್ಕೆ ಎಷ್ಟೇ ಹೊರೆಯಾದರೂ ಕೂಡ ಆ ಕಟ್ಟಡಗಳನ್ನು ಕಾಪಾಡಿಕೊಳ್ಳಲು ವಾಚ್‌ಮನ್ ಬೇಕು. ಶಾಲೆಯಲ್ಲಿ ಮಕ್ಕಳ ಕೈಯಲ್ಲಿ ಕಸ ಗುಡಿಸುವ ಕೆಲಸವನ್ನು ನಿಲ್ಲಿಸಿ ಆ ಕೆಲಸಕ್ಕೆ ಒಬ್ಬ ವಾಚ್‌ಮನ್ ಅಥವಾ ಗುಡಿಸುವುದಕ್ಕೆ ಕೆಲಸಗಾರರನ್ನು ಕಡ್ಡಾಯವಾಗಿ ನೇಮಿಸುವುದಕ್ಕೆ ಪ್ರತಿಯೊಂದು ಶಾಲೆಗೂ ಈ ಕೆಲಸವನ್ನು ಮಾಡಬೇಕು. ನಂತರ ಒಂದು ಬಹಳ ಮುಖ್ಯವಾದ ವಿಚಾರ. ನಾನು ನಿನ್ನೆಯೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯ ಸಚಿವರ ಉತ್ತರ ಕಾಣುತ್ತಿಲ್ಲ. ನಾವು ಜಾತ್ಯಾತೀತ ದೇಶವೆಂದು ಹೇಳಿಕೊಳ್ಳುತ್ತೇವೆ. ಅದು ಬರೀ ನಾಲಿಗೆಯಲ್ಲಿ, ತುಟಿಯಿಂದ ಹೊರಗೆ ಮಾತ್ರ ಬರುತ್ತದೆಯೇ ಹೊರತು, ವಾಸ್ತವಿಕವಾಗಿ ಆ ಭಾವನೆಗಳನ್ನು ಎಳೆಯ ಕಂದಮ್ಮಗಳ ಹೃದಯದಲ್ಲಿ ಏನು ಬಿತ್ತ ಬೇಕಾಗಿದೆ ಅದನ್ನು ನಾವು ಮಾಡುತ್ತಿಲ್ಲ. ನಾವು ಶಾಲೆಗಳಿಗೆ ಮಕ್ಕಳನ್ನು ಸೇರಿಸುವಾಗ ಯಾವ ಜಾತಿ, ಯಾವ ಮತ ಎಂದು ಕೇಳುವುದನ್ನು ಇವತ್ತೂ ಕೂಡ ನಮ್ಮಿಂದ ಬಿಡುವುದಕ್ಕೆ ಆಗಿಲ್ಲ. ಸರ್ಕಾರಕ್ಕೆ ಏನು ತೊಂದರೆ ಇದೆ? ಆ ಕಾಲಮ್‌ಅನ್ನೇ ತೆಗೆಯುವಂಥ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ನನಗೆ ಬಹಳ ದಿವಸಗಳಿಂದ ಆಸೆ ಇದೆ. ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಮಾನ್ಯ ವಿದ್ಯಾ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ, ದಯವಿಟ್ಟು ಮಕ್ಕಳನ್ನು ಶಾಲೆಗೆ ಸೇರಿಸುವಾಗ 'ನೀನು ಯಾವ ಜಾತಿಯವನು?' ಎಂದು ಕೇಳುವುದನ್ನು ದಯವಿಟ್ಟು ಕೈ ಬಿಡಬೇಕು. 'ಯಾವ ಮತ?' ಎಂದು

ಕೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ನಾವು ಜಾತ್ಯಾತೀತ ರಾಷ್ಟ್ರದಲ್ಲಿದ್ದೇವೆ ಎಂದು ಹೇಳುವಾಗ ಅದನ್ನು ದಯವಿಟ್ಟು ತೆಗೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೇ, ಟಿ.ಸಿ.ಎಚ್. ಅಡ್ಮಿಶನ್ ಮಾಡುವ ಗೌವರ್ನ್‌ಮೆಂಟ್ ಟಿ.ಟಿ.ಐ.ಗಳಿಗೆ ಕೇವಲ 60 ಜನರನ್ನು ತಾವು ಲಿಮಿಟ್ ಮಾಡಿದ್ದೀರಿ. ಇವರಲ್ಲಿ 20 ಮಂದಿ ಉರ್ದು ಟೀಚರ್ಸ್ ಇರುವುದರಿಂದ, ಅದರಲ್ಲಿ ಲೆಕ್ಚರರ್ಸ್‌ರಲ್ಲಿ ಸುಮಾರು ಹತ್ತರಿಂದ ಹನ್ನೊಂದು ಮಂದಿ ಇರುತ್ತಾರೆ. ಒಬ್ಬೊಬ್ಬರು ಒಂದೊಂದು ಸಬ್ಜೆಕ್ಟ್ ಬಂದಾಗ ಆರೇಳು ಜನ ಮಕ್ಕಳನ್ನು ಕೂರಿಸಿಕೊಂಡು ಪಾಠ ಹೇಳುತ್ತಿರುತ್ತಾರೆ. ಈ ಸಂಖ್ಯೆಯನ್ನು ಹೆಚ್ಚು ಮಾಡಿದರೆ ಅವರಿಗೆ ಪಾಠ ಮಾಡುವುದರಲ್ಲಿ ತೊಂದರೆ ಆಗುವುದಿಲ್ಲ. ದಯವಿಟ್ಟು ಈ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಇದಕ್ಕೆ ಎಕ್ಸ್‌ಟ್ರಾ ಟೀಚಿಂಗ್ ಸ್ಟಾಫ್ ಏನೂ ಬೇಕಾಗಿಲ್ಲ. ಯಾವುದೇ ಫೈನಾನ್ಸಿಯಲ್ ಹೊರೆ ಕೂಡ ಬೇಕಾಗಿಲ್ಲ. ಎರಡನೆಯದು, ಅಪಾಯಿಂಟ್‌ಮೆಂಟಿನಲ್ಲಿ ವಯಸ್ಸನ್ನು ದಯವಿಟ್ಟು ಪರಿಗಣನೆಗೆ ತೆಗೆದುಕೊಳ್ಳಬಾರದು. ಇವತ್ತಿನ ಪರಿಸ್ಥಿತಿ ಏನು ಎಂಬುದು ತಮಗೆ ಗೊತ್ತಿದೆ. ಯಾವದೇ ರೀತಿಯ ಹಠ ಮಾಡದೆ ಸರ್ಕಾರ ಅರ್ಹತೆಯನ್ನು ಮಾತ್ರ ಪರಿಗಣಿಸಬೇಕು. ಮೂರನೆಯದು, ಈಗ ಎ.ಇ.ಒ. ಮತ್ತು ಬಿ.ಇ.ಒ. ಎರಡು ತಾಲ್ಲೂಕು ಮಟ್ಟದಲ್ಲಿ ಮಾಡಿದ್ದೀರಿ. ನಾನು ಕೇಳುವುದು ಏನೆಂದರೆ ಬರೀ ಬಿ.ಇ.ಒ.ಗಳನ್ನು ಮಾತ್ರ ಇಟ್ಟುಕೊಂಡು ಎ.ಇ.ಒ.ಗಳನ್ನು ಮಾಮೂಲಿ ಹೆಡ್‌ಮಾಸ್ಟರ್ ಆಗಿ ದಯಮಾಡಿ ಮಾಡಿಬಿಡಿ. ಖಾಸಗೀ ಅನುದಾನಿತ ಶಾಲೆಗಳಿಗೆ ಅಡ್ಮಿಶನ್ ಮಾಡುವಾಗ ಅವರು ಬರೀ ಪರ್ಸೆಂಟೇಜ್ ಇರುವವರನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಒಟ್ಟಾರೆ ಪಬ್ಲಿಕ್ ಆಗಿ ಯಾರು ಅರ್ಜಿಯನ್ನು ಹಾಕಿರುತ್ತಾರೆ, ಅವರ ಹೆಸರುಗಳನ್ನು ಅನೌನ್ಸ್ ಮಾಡಬೇಕು. ಅದರ ಆಧಾರದ ಮೇಲೆ ತೆಗೆದುಕೊಳ್ಳುವ ಹಾಗೆ ಮಾಡಬೇಕು. ಕೊನೆಯದಾಗಿ ಒಲಂಪಿಕ್ಸ್‌ನಲ್ಲಿ ಭಾರತದ ಮರ್ಯಾದೆ ಹೋಗಿರುವುದನ್ನು ನಾವು ನೋಡಿದ್ದೇವೆ. ಆರು ಪ್ಲಸ್ ಒಂದಲ್ಲ, ತಾವು ನಾಲ್ಕು ಪ್ಲಸ್ ಒಂದಾದರೂ ಕೊನೆಯಪಕ್ಷ ಮಾಡಬೇಕು. ತಾವು ಈ ದೈಹಿಕ ಶಿಕ್ಷಣಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಅವರು ಕೂಡ ಪಾಠ ಮಾಡುವುದಕ್ಕೆ ಅರ್ಹತೆ ಹೊಂದಿರುತ್ತಾರೆ. ಅವರು ಎರಡನ್ನೂ ಮಾಡುತ್ತಾರೆ. ದಯವಿಟ್ಟು ಆರು ಪ್ಲಸ್ ಒಂದು ಎನ್ನುವುದನ್ನು ಬಿಟ್ಟು ನಾಲ್ಕು ಪ್ಲಸ್ ಒಂದು ಅಂತ ಮಾಡಿ. ಅವರಿಗೆ ಸಿ.ಪಿ.ಎಡ್. ಮಾಡಿ ಈಗಾಗಲೇ ನಲ್ವತ್ತು, ಐವತ್ತು ವರ್ಷ ಆಯಿತು. ಹೆಚ್ಚು ಕಡಿಮೆ ನಿರುದ್ಯೋಗಿಗಳಾಗಿ, ಅನೇಕರು ಮದುವೆಯಾಗಿ ಹೆಂಡತಿ, ಮಕ್ಕಳ ಜೊತೆಗೆ ಇದ್ದು, ಕೆಲವರು ಪರಲೋಕಕ್ಕೂ ತೆರಳಿದ್ದಾರೆ. ದಯವಿಟ್ಟು ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಅಧ್ಯಕ್ಷರು:- ಗೋವಿಂದೇಗೌಡರೇ, ಮಾನ್ಯ ಸದಸ್ಯರುಗಳು ಯೋಗ್ಯವಾದ ಸಲಹೆಗಳನ್ನು ಮಾಡಿದ್ದಾರೆ. ಅವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಸೂಕ್ತ ಕಾಲದಲ್ಲಿ ತಾವು ಕ್ರಮ ತೆಗೆದುಕೊಳ್ಳಿ. ಏಕೆಂದರೆ ಲೇಟ್ ಆಗುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ನಾನು ಮಾಡುತ್ತೇನೆ.

ಅಧ್ಯಕ್ಷರು:- ಎಲ್ಲವೂ ಬಹಳ ಯೋಗ್ಯವಾದ ಸಲಹೆಗಳು ಬಂದಿವೆ. ತಾವು ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ, ಸರಿಯಾದ ಸಮಯದಲ್ಲಿ ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ನಾನು 'ಪ್ರಾಮಾಣಿಕವಾಗಿ, ಪ್ರಾಮಾಣಿಕವಾಗಿ' ಎಂದು ಎರಡು ಸಲ ಹೇಳಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಗೋವಿಂದೇಗೌಡರ ಪ್ರಾಮಾಣಿಕತೆ ಬಗ್ಗೆ ನಮಗೆ ಅನುಮಾನ ಇಲ್ಲ. ಸಿ.ಓ.ಡಿ. ತನಿಖೆ ಬಗ್ಗೆ ತಾವು ದಯವಿಟ್ಟು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಉತ್ತರ ಅಗತ್ಯ ಇಲ್ಲ. ಅನೇಕ ವಿಷಯಗಳನ್ನು ನಾವು ಮಾತನಾಡಿದ್ದೇವೆ ಮತ್ತು ಅದು ಅವರ ಗಮನಕ್ಕೆ ಬಂದಿದೆ. ಅವರು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ವಿಶ್ವಾಸ ನಮಗೂ ಇದೆ, ನಿಮಗೂ ಇದೆ. ಕ್ಲಾರಿಫಿಕೇಶನ್‌ಗೆ ಉತ್ತರ ಕೊಡುವ ಅಗತ್ಯ ಇಲ್ಲ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ನಿಮ್ಮವರು ಬಹಳ ಪ್ರೆಸ್ ಮಾಡುತ್ತಿದ್ದಾರೆ. ಅದು ಒಂದು ಸ್ವಲ್ಪ ಬರ್ನಿಂಗ್ ಇಶ್ಯು ಇದೆ. ಎಸ್.ಎಸ್.ಎಲ್.ಸಿ. ಫೇಕ್ ಮಾರ್ಕ್ಸ್‌ಕಾರ್ಡ್ ಏನಾಗಿದೆ, ಅದರ ಬಗ್ಗೆ ನಾನೇ ಟ್ರೇಸ್‌ಔಟ್ ಮಾಡಿ ಇದರ ಬಗ್ಗೆ ಕಠಿಣವಾಗಿರತಕ್ಕಂಥ ಕ್ರಮ ತೆಗೆದುಕೊಳ್ಳಲಿಕ್ಕೆ ಆದೇಶ ಮಾಡಿದ್ದೇನೆ. ಆದರೆ ನಾವೇ ಮಾಡಿದರೆ ಇದು ಸರಿಯಾಗುತ್ತದೆಯೋ ಇಲ್ಲವೋ ಅಥವಾ ಇದರಲ್ಲಿ ಏನಾದರೂ ಬೇರೆ ರೀತಿಯ ಅಪಾರ್ಥಕ್ಕೆ ಅವಕಾಶವಾಗುತ್ತದೆ ಎಂದು ತಿಳಿದುಕೊಂಡು ನಾವು ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ್ದೇವೆ. ಕಠಿಣವಾಗಿರತಕ್ಕಂಥ ಕ್ರಮ ತೆಗೆದುಕೊಳ್ಳಬೇಕು, ಯಾರು ತಪ್ಪಿತಸ್ಥರು ಇದ್ದಾರೆ, ಅವರು ಎಷ್ಟೇ ದೊಡ್ಡವರಿರಲಿ, ಅವರಿಗೆ ಏನೇ ಇನ್‌ಫ್ಲುಯೆನ್ಸ್ ಇರಲಿ, ಅವರಿಗೆ ಕಠಿಣವಾದ ಶಿಕ್ಷೆಯನ್ನು ಒದಗಿಸಿಕೊಡಬೇಕಾಗುತ್ತದೆ. ಸಿ.ಓ.ಡಿ.ಗೆ ರೆಫರ್ ಮಾಡಿ ಹತ್ತು ತಿಂಗಳಾಗಿದೆ. ಪುನಃ ನಿನ್ನೆ ತಾನೆ ಕೇಳಿದರು . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಸರ್ಕಾರ ಆಜ್ಞೆ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸಾಕು ಬಿಡಿ ಅಂದರೂ ಬಿಡವೊಲ್ಲರು.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಪುನಃ ಸಂಬಂಧಪಟ್ಟಿರತಕ್ಕಂಥ ಮಂತ್ರಿಗಳ ಗಮನಕ್ಕೆ ತಂದು ಇದನ್ನು ಹೇಳಿದ್ದೇನೆ, ಮುಖ್ಯಮಂತ್ರಿಗಳಿಗೂ ಇದನ್ನು ಹೇಳಿದ್ದೇನೆ.

ಶ್ರೀ ಯು.ಆರ್. ಸಭಾಪತಿ:- ನಿಮಗೂ ಅವರಿಗೂ ಇದರ ಬಗ್ಗೆ ಏನಾದರೂ ಭಿನ್ನಾಭಿಪ್ರಾಯ ಇದೆಯೇ? ಏಕೆಂದರೆ ನೀವು ಬರೆದು ಹತ್ತು ತಿಂಗಳಾಯಿತು. ಆದರೂ ಅವರು ಏನೂ ಕ್ರಮ ತೆಗೆದುಕೊಂಡಿಲ್ಲ ಎಂದರೆ ನಿಮ್ಮೊಳಗೆ ಭಿನ್ನಾಭಿಪ್ರಾಯ ಇರಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಭಿನ್ನಾಭಿಪ್ರಾಯ ಯಾವುದೇ ರೀತಿಯಲ್ಲೂ ಇಲ್ಲ. ನಮ್ಮ

ಮಂತ್ರಿಮಂಡಲದಲ್ಲಿ ಆಗಲಿ, ನಮ್ಮಲ್ಲಿಯಾಗಲಿ, ಖಂಡಿತ ಭಿನ್ನಾಭಿಪ್ರಾಯ ಇಲ್ಲ. ನಿಮಗೂ ನಮಗೂ ಭಿನ್ನಾಭಿಪ್ರಾಯ ಇಲ್ಲದಿದ್ದಾಗ ನಮ್ಮನಮ್ಮ ಒಳಗೆ ಭಿನ್ನಾಭಿಪ್ರಾಯ ಎಲ್ಲಿ ಬರುತ್ತದೆ ಹೇಳಿ. ನನ್ನ ಮೇಲೆ ನಂಬಿಕೆ ಇಡಿ. ಇದರ ಮೇಲೆ ತಾವು ಏನೇನು ಕೇಳಿದ್ದೀರಿ, ಈ ಬಗ್ಗೆ ಆದಷ್ಟು ಜಾಗ್ರತೆಯಾಗಿ ಕಾರ್ಯಕ್ರಮ ಕೈಗೊಂಡು ಮುಂದಿನಸಾರಿ ನಿಮಗೆಲ್ಲರಿಗೂ ವ್ಯವಸ್ಥಿತವಾಗಿ ಕ್ರಮ ಕೈಗೊಂಡಿರುವುದನ್ನು ತಿಳಿಸುತ್ತೇನೆ.

(ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೇ, ಆರೋಗ್ಯ ಇಲಾಖೆ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡ 70ಕ್ಕೂ ಹೆಚ್ಚು ಭಾಗ ವಾಸಮಾಡತಕ್ಕ ಜನತೆಗೆ ಮತ್ತು ಪಟ್ಟಣ ಪ್ರದೇಶದ ಬಡ ಜನರಿಗೆ ಅತ್ಯಂತ ಮಹತ್ತರ ಪಾತ್ರವನ್ನು ವಹಿಸಬೇಕಾದ ಸನ್ನಿವೇಶ . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಹೊಸದಾಗಿ ಮೊದಲನೆಯ ಸಲ ಉತ್ತರ ಹೇಳುತ್ತಿದ್ದಾರೆ. ಪತ್ರಿಕೆಯವರೂ ಇಲ್ಲ. ಏಕೆಂದರೆ, ಅನೇಕ ಯೋಜನೆಗಳು, ಮತ್ತು ಕೆಲಸಗಳನ್ನು ಹೇಳ ಬೇಕಾದರೆ, ಇವು ಜನರಿಗೂ ಗೊತ್ತಾಗಬೇಕಲ್ಲ. ಅದಕ್ಕಾಗಿ ನಾಳೆ ಪ್ರಾರಂಭ ಮಾಡಿದರೆ ಒಳ್ಳೆಯದು. ನನಗೇನೂ ಅಭ್ಯಂತರವಿಲ್ಲ. ನಿಮಗಿಂತ ಹೆಚ್ಚು ವೇಳೆ ಕೊಡುತ್ತೇನೆ. ಬೆಳಿಗ್ಗೆ 9-30ಕ್ಕೆ ಬಂದರೆ, ಸಭೆ ಮುಗಿಯುವರೆಗೂ ಇರುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ನಿಮಗೆ ಸಮಾಧಾನ ತಂದರೆ ಸಾಕು. ಬಾಕಿಯವರಿಗೆ ಬೇಡ.

ಡಾ: ಎಂ.ಪಿ. ಕರ್ಕಿ:- ಊಟದ ವ್ಯವಸ್ಥೆ ಏನಾದರೂ ಮಾಡಿದ್ದೀರೋ?

ಅಧ್ಯಕ್ಷರು:- ಊಟದ್ದು, ಮಲಗುವುದು ನನ್ನ ಜವಾಬ್ದಾರಿ ಅಲ್ಲ. ಬಹಳ ಹೆಚ್ಚು ಎಂದರೆ ಊಟಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೇನೆ. ಆಮೇಲೆ ಬೇರೆ ಏನನ್ನೂ ಕೇಳಬೇಡಿ. ನಿಮ್ಮಷ್ಟಕ್ಕೆ ನೀವು ಹೋಗಬೇಕಾಗುತ್ತದೆ.

ಡಾ: ಹೆಚ್.ಸಿ. ಮಹದೇವಪ್ಪ:- ಅನೇಕ ಮಾನ್ಯ ಗೌರವಾನ್ವಿತ ಸದಸ್ಯರು ಉತ್ತಮವಾದ ಸಲಹೆಗಳನ್ನು ಈ ಇಲಾಖೆಯ ಸುಧಾರಣೆ ಮತ್ತು ಈ ಇಲಾಖೆಯ ಸೇವಾಭಾವನೆಯಲ್ಲಿ ತೊಡಗ-ಬೇಕಾದಂಥ ರೀತಿನೀತಿಗಳ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಹಿಂದಿನ ಆರೋಗ್ಯ ಮಂತ್ರಿಗಳಾದಂಥ ಡಾ: ಮಲಕಾರೆಡ್ಡಿಯವರು, ಈ ಇಲಾಖೆಯನ್ನು ನಡೆಸತಕ್ಕ ಸಂದರ್ಭದಲ್ಲಿ ಈ ಇಲಾಖೆಯು ಎದುರಿಸತಕ್ಕ ಸಮಸ್ಯೆಗಳನ್ನು ಹೇಳಿರತಕ್ಕಂಥ ಮಾತುಗಳಲ್ಲಿ ಸತ್ಯಾಂಶ ಇದೆ. ಅನೇಕ ಮಾನ್ಯ ಸದಸ್ಯ-ರುಗಳು, ಈ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ, ಕಟ್ಟಡಗಳ ಕೊರತೆ, ವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸ ಮಾಡುತ್ತಾ ಇಲ್ಲ ಎಂದು ಹೇಳಿದರು. ಶೇಕಡ 10 ಭಾಗ ಹಣವನ್ನು ಆರೋಗ್ಯ